ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು

ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಸೆಪ್ಟೆಂಬರ್ 2024








September 2024

## "ಸಮುದಾಯ ಆಧಾರಿತವಾಗಿ ಆಪ್ತ ಸಮಾಲೋಚನೆ ತರಬೇತಿಯ ಕಾರ್ಯಗಾರ"

ಆಗಸ್ಟ್ 6 ರಂದು ಮಂಗಳವಾರ ಮುಂಜಾನೆ 11:00 ಗಂಟೆಗೆ ಆರ್ಬಿಟ್ ಸಂಸ್ಥೆಯಲ್ಲಿ ನವಜೀವನ ಕಾರ್ಯಕ್ರಮದಡಿಯಲ್ಲಿ ಹುಮ್ನಾಬಾದ್ ಹಾಗೂ ಚಿಟಗುಪ್ಪ ತಾಲೂಕಿನ ವಿ.ಆರ್.ಡಬ್ಲ್ಯೂಗಳಿಗೆ ಆಪ್ತ ಸಮಾಲೋಚನೆ ತರಬೇತಿ ಹಮ್ಮಿಕೊಳ್ಳಲಾಗಿತ್ತು. ಮೊದಲಿಗೆ ವೇದಿಕೆ ಮೇಲಿನ ಗಣ್ಯರಿಗೆ ಶ್ರೀಮತಿ ಪ್ರೀತಿ ಅವರು ಸ್ವಾಗತಿಸಿದರು, ನಂತರ ಗಣ್ಯರಿಂದ ಸಸಿಗೆ ನೀರು ಹಾಕುವುದರ ಮೂಲಕ ತರಬೇತಿಯನ್ನು ಉದ್ಘಾಟಿಸಲಾಯಿತು. ಆರ್ಬಿಟ್ ಸಂಸ್ಥೆಯು ಸುಮಾರು 30 ವರ್ಷಗಳಿಂದ ಸಮಾಜಸೇವೆ ಮಾಡುತ್ತಾ ಹಲವಾರು ಯೋಜನೆಗಳಿಂದ ಸಮಾಜದಿಂದ ಅಂಚಿಗೆ ತಳ್ಳಲ್ಪಟ್ಟವರ ಹಾಗೂ ಬಡಜನರ, ಸಮುದಾಯದ ವ್ಯವಸ್ಥೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ, ಮತ್ತು ಪ್ರಸ್ತುತ ಕಾರ್ಯಗಾರದ ಉದ್ದೇಶ ಮಾನಸಿಕ ಅಸ್ವಸ್ಥರನ್ನು ಸಮುದಾಯವಾಗಿ ಪುನರ್ವಸತಿ ಕಲ್ಪಿಸುವ ಯೋಜನೆ ಇದ್ದು, ಈ ಕಾರ್ಯಕ್ರಮವನ್ನು ಸಾಂಸ್ಥಿಕ ಬದಲಾಗಿ ಸಮುದಾಯವಾಗಿ ಮಾರ್ಪಡಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಎಂದು ನವಜೀವನ ಕಾರ್ಯಕ್ರಮದ ಸಂಯೋಜಕದ ಶ್ರೀ ಪ್ರವೀಣ್ ಕುಮಾರ್ ಅವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ವ್ಯಕ್ತಪಡಿಸಿದರು. ತದನಂತರ ಸಂಸ್ಥೆಯ ನಿರ್ದೇಶಕರಾದ ಒಂದನೆಯ ಫಾದರ್ ವಿಕ್ಟರ್ ವಾಸರವರು ತರಬೇತಿ ಕಾರ್ಯಗಾರವನ್ನು ಉದ್ದೇಶಿಸಿ ಮಾತನಾಡುತ್ತಾ ಎರಡು ಕೈಯಿಂದ ಚಪ್ಪಾಳೆ ಬಾರಿಸಿದರೆ ಹೇಗೆ ಫಲಿತಾಂಶ ಸಿಗುತ್ತದೆಯೋ ಹಾಗೆಯೇ ಸಂಸ್ಥೆಯೊಂದಿಗೆ ವಿಕಲಚೇತನರ ಪುನರ್ವಸತಿ ಕಲ್ಪಿಸುವ ಕಾರ್ಯಕರ್ತರ ಸಹಕಾರ ಬಹಳ ಮುಖ್ಯ ಎಂದು ತಿಳಿಸಿದರು ಹಾಗೂ ಕಾರ್ಯಗಾರದ ತರಬೇತಿಯನ್ನು ಪಡೆದು ತಾವುಗಳು ಆಪ್ತ ಸಮಾಲೋಚಕರಾಗಿ ಕಾರ್ಯನಿರ್ವಹಿಸಲು ಸಾಧ್ಯ ಎಂದು ಪ್ರೋತ್ಸಾಹಿಸಿದರು. ತದನಂತರ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ವಂದನಿಯ ಫಾದರ್ ವಿನ್ಸೆಂಟ್ ಪೀರೇರ ಅವರು ಕಾರ್ಯಗಾರದ ವರ್ಗದಲ್ಲಿ ಆಪ್ತ ಸಮಾಲೋಚನೆಯ ಮೂಲತತ್ವಗಳು, ಆಪ್ತ ಸಮಾಲೋಚಕರಿಗೆ ಇರುವ ಕೌಶಲ್ಯಗಳ ಮತ್ತು ಆಪ್ತ ಸಮಾಲೋಚನೆಯ ವಿಧಗಳನ್ನು ವಿವರವಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ವಂದನಿಯ ಪಾದದ ವಿಜಯಕುಮಾರ್, ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾ ಮ್ಯಾಥ್ಯೂ, ವಿಕಲಚೇತನರ ಜಿಲ್ಲಾ ಸಂಯೋಜಕರಾದ ಸಂತೋಷ್ ಪಟ್ಟೆಧರ್, ಎಂ.ಆರ್.ಡಬ್ಲ್ಯೂ ಜಗನ್ನಾಥ್ ಗಾರಿ ಮತ್ತು ತಾಲೂಕಿನ ಎಲ್ಲ ವಿ.ಆರ್.ಡಬ್ಲ್ಯೂಗಳು, ನವಜೀವನ ಸಿಬ್ಬಂದಿ ವರ್ಗದವರು ಹಾಜರಿದ್ದು ಶ್ರೀಮತಿ ಪೂಜಾ ನಿರೂಪಿಸಿ, ಶ್ರೀ ಹನುಮಂತ್ ಪ್ರಾರ್ಥಿಸಿದರು ಮತ್ತು ಈ ಕಾರ್ಯಗಾರವನ್ನು ಶ್ರೀ ಲೋಕೇಶ್ ಅವರ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.



ಪೂಜ್ಯ ರಾಬರ್ಟ್ ಮಿರಾಂದಾ
ಗುಲಬರ್ಗಾ ಧರ್ಮಾಧ್ಯಕ್ಷರು

ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ









orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

# "ನವಜೀವನ (ಎ.ಪಿ.ಎಫ್) ಕಾರ್ಯಕ್ರಮ"

## "ಪ್ರೌಢಶಾಲಾ ಶಿಕ್ಷಕರಿಗೆ ಆಪ್ತ ಸಮಾಲೋಚನೆಯ ತರಬೇತಿ"





ಆಗಸ್ಟ್ 27 ರಂದು ಹುಮ್ನಾಬಾದ್ ನಗರದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ, ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಪ್ರೌಢ ಶಾಲಾ ಶಿಕ್ಷಕರಿಗೆ ಆಪ್ತ ಸಮಾಲೋಚನೆ ತರಬೇತಿಯ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಡಾಕ್ಟರ್ ಪ್ರೀತಮ್ ತಜ್ಞ ವೈದ್ಯರು ಬ್ರಿಮ್ಸ ಬೋಧನಾ ಆಸ್ಪತ್ರೆ ಬೀದರ್. ಮಾನಸಿಕ ಕಾಯಿಲೆಯ ಕುರಿತು ತಿಳಿಸುತ್ತಾ, ಮಾನಸಿಕ ಕಾಯಿಲೆಯನ್ನು ಪತ್ತೆ ಹಚ್ಚುವ ವಿಧನಗಳು, ಅದರ ಗುಣಲಕ್ಷಣಗಳನ್ನು ಹಾಗೂ ಅವುಗಳನ್ನು ತಡೆಗಟ್ಟುಕೊಳ್ಳಬಹುದು ಎಂದು ತರಬೇತಿಯ ಜೊತೆಗೆ ವ್ಯಾಯಾಮ ಮಾಡುವುದರ ಮೂಲಕ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 32 ಜನ ಶಿಕ್ಷಕರು ಭಾಗವಹಿಸುವ ಮೂಲಕ ಆಪ್ತ ಸಮಾಲೋಚನೆಯ ಕುರಿತು ಮಾಹಿತಿಯನ್ನು ಪಡೆದುಕೊಂಡರು.

## "ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತೆಯರಿಗೆ ಒಂದು ದಿವಸದ ತರಬೇತಿ ಕಾರ್ಯಗಾರ"



ಆಗಸ್ಟ್ 24 ರಂದು ಚಿಟಗುಪ್ಪಾ ತಾಲೂಕಿನ ಬೇಮಲಖೇಡ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತೆಯರಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥತೆಯ ಕುರಿತು ಒಂದು ದಿವಸದ ತರಬೇತಿ ಕಾರ್ಯಗಾರವನ್ನು ನಡೆಸಲಾಯಿತು. ಈ ತರಬೇತಿ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ಕುಮಾರ್ ಅವರು ಮಾನಸಿಕ ಆರೋಗ್ಯ ಹಾಗೂ ಮಾನಸಿಕ ಕಾಯಿಲೆಯ ಕುರಿತು ವಿವರಿಸುತ್ತಾ, ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆಯಾಗಿದೆ ಮತ್ತು ಇತರ ಕಾಯಿಲೆಗಳಂತೆ ಇದು ಕೂಡ ಒಂದು ಕಾಯಿಲೆಯಾಗಿದೆ ಎಂದು ಸವಿಸ್ತಾರವಾಗಿ ಮಾಹಿತಿ ನೀಡಿದರು. ಕಾಯಿಲೆಯ ಲಕ್ಷಣಗಳು ಮತ್ತು ಕಾಯಿಲೆ ಬಂದಾಗ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ತಪಾಸಣೆ ಮತ್ತು ಮಾತ್ರೆಗಳು ಲಭ್ಯವಿದ್ದು ಅದರ ಸದುಪಯೋಗವನ್ನು ಪಡೆಯಬೇಕೆಂದು ಮಾಹಿತಿ ನೀಡಿದರು. ಈ ತರಬೇತಿ ಕಾರ್ಯಗಾರದಲ್ಲಿ ಆಶಾ ಕಾರ್ಯಕರ್ತರು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಸೇರಿ ಒಟ್ಟು 32 ಜನರು ಭಾಗವಹಿಸಿದ್ದರು.

## "ಮಾನಸಿಕ ಅಸ್ವಸ್ಥರ ಬಗ್ಗೆ ಜಾಗೃತಿ ಕಾರ್ಯಕ್ರಮ"



ಆಗಸ್ಟ್ 5 ರಂದು ಹುಮ್ನಾಬಾದ್ ತಾಲೂಕಿನ ಕಲ್ಲೂರ ಗ್ರಾಮ ಪಂಚಾಯಿತಿಯಲ್ಲಿ ಮಾನಸಿಕ ಅಸ್ವಸ್ಥರ ಬಗ್ಗೆ ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿಯ ಬಿಲ್ ಕಲೆಕ್ಟರ್ ಮಹೇಶ್ ಕುಮಾರ್ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ಶ್ರೀಮತಿ ಲಕ್ಷ್ಮೀಬಾಯಿ ಎಚ್.ಸಿ.ಓ ಇವರು ಮತ್ತು ಗ್ರಾಮ ಪಂಚಾಯತಿ ಸದಸ್ಯರಾದ ಅಮೃತ್, ತಿಪ್ಪಣ್ಣ. ಕಾರ್ಯದರ್ಶಿಯಾದ ಶ್ರೀ ನಾರಾಯಣ ಮತ್ತು ಪ್ರಭು ಇವರು ಭಾಗವಹಿಸಿದ್ದರು. ಆರ್ಬಿಟ್ ಸಂಸ್ಥೆ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಹಾದೇವಿ ರವರು, ಮಾನಸಿಕ ಅಸ್ವಸ್ಥರ ಕಾಯಿಲೆಯ ಲಕ್ಷಣಗಳಾದ ಕಾರಣವಿಲ್ಲದೆ ನಗುವುದು, ದಾರಿಯಲ್ಲಿ ಹೋಗುವರನ್ನು ಕಂಡು ಕೆಟ್ಟ ಮಾತನಾಡುವರು, ಮನೆಯಲ್ಲಿದ್ದ ವಸ್ತುವನ್ನು ಬೀಸಾಡುವದು, ಕಲ್ಲಿಂದ ಹೊಡೆಯುವುದು, ಪದೇ ಪದೇ ಕೈ ತೊಳೆಯುವದು ,ಕಾಲು ತೊಳೆಯುವದು, ಇಂತಹ ಲಕ್ಷಣಗಳು ಕಂಡುಬಂದಲ್ಲಿ ಅವರಿಗೆ ಉಚಿತವಾಗಿ ಔಷಧಿ ಲಭ್ಯವಿದೆ. ಇಂತಹ ಮೇಲ್ಕಂಡ ಲಕ್ಷಣಗಳು ಕಂಡು ಬಂದರೆ, ಕೂಡಲೆ ತಜ್ಞ ಮನೋವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆಯುವಂತೆ ಪ್ರೇರೇಪಿಸಿದರು. ಶ್ರೀಮತಿ ಲಕ್ಷ್ಮಿಬಾಯಿವರು ಆರೋಗ್ಯದ ಕುರಿತು ಮಾತನಾಡಿದರು. ಮತ್ತೆ ಮಕ್ಕಳಿಗೆ ದಿನ ಸ್ನಾನ ಮಾಡಿಸಬೇಕು, ಬಿಸಿ ನೀರು ಕುಡಿಸಬೇಕು, ಡೆಂಗು ಜ್ವರ ಬರದಂತೆ ನಿಮ್ಮ ಮನೆಯ ಸುತ್ತ ಮುತ್ತಲು ಸ್ವಚ್ಛವಾಗಿ ಇಟ್ಟುಕೊಳ್ಳುವಂತೆ ಮಾಹಿತಿ ನೀಡಿದರು.

## “ಸಮುದಾಯ ಆರೋಗ್ಯ ಕೇಂದ್ರದಲ್ಲಿ, ಜಿಲ್ಲಾ ಮಾನಸಿಕ ಅಸ್ವಸ್ಥರ ಕಾರ್ಯಕ್ರಮ ಶಿಬಿರ”



ಆಗಸ್ಟ್ 23 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಕೇಡ್ ಬಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ, ಜಿಲ್ಲಾ ಮಾನಸಿಕ ಅಸ್ವಸ್ಥರ ಕಾರ್ಯಕ್ರಮ ಶಿಬಿರ ನಡೆಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 52 ಮಾನಸಿಕ ಅಸ್ವಸ್ಥರು ತಜ್ಞ ಮನೋವೈದ್ಯರಿಂದ ತಪಾಸಣೆಗೆ ಒಳಗೊಂಡರು. ತಮ್ಮ ಮಾನಸಿಕ ಕಾಯಿಲೆಯ ಕುರಿತು ವೈದ್ಯರೊಂದಿಗೆ ಚರ್ಚೆಯನ್ನು ಮಾಡಿ ಮಾತ್ರೆಗಳನ್ನು ತೆಗೆದುಕೊಂಡರು. ತಜ್ಞ ಮನೋವೈದ್ಯರಾದ ಅಮೂಲ್ ಶರೀಫ್ ರವರು ರೋಗಿಗಳನ್ನ ತಪಾಸಣೆ ಮಾಡಿ, ಸೂಕ್ತ ಸಲಹೆಗಳನ್ನು ನೀಡಿದರು. ಸರಿಯಾದ ಸಮಯಕ್ಕೆ ಮಾತ್ರೆ ತೆಗೆದುಕೊಳ್ಳುವುದು ಮತ್ತು ಯಾವುದೇ ಮಾನಸಿಕ ಒತ್ತಡವನ್ನು ತೆಗೆದುಕೊಳ್ಳಬಾರದು ಎಂದು ಸಲಹೆ ನೀಡಿದರು. ಈ ಕಾರ್ಯಕ್ರಮದಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್, ಅರುಣ್ ಕುಮಾರ್, ರವಿ , ಪ್ರೀತಿ ರವರು ಭಾಗವಹಿಸಿದ್ದರು.

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



ಆಗಸ್ಟ್ 28 ರಂದು ಹುಮನಾಬಾದ್ ತಾಲೂಕಿನ ಸುಲ್ತಾನ್ ಬಾದ್ ವಾಡಿ ಗ್ರಾಮದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಹುಮನಾಬಾದ್ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯದ ಶ್ರೀಮತಿ ಪೂಜಾ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ. ಮಾನಸಿಕ ಕಾಯಿಲೆ, ಅದರ ಲಕ್ಷಣಗಳ ಕುರಿತು ಮಾಹಿತಿ ನೀಡುತ್ತಾ, ಮಾನಸಿಕ ಕಾಯಿಲೆ ಬಂದರೆ ಭಯಪಡುವ ಅವಶ್ಯಕತೆ ಇಲ್ಲ ಯಾಕೆಂದರೆ ಇತರ ಕಾಯಿಲೆಗಳಂತೆ ಇದು ಕೂಡ ಒಂದು ಮೆದುಳಿನ ಕಾಯಿಲೆಯಾಗಿದೆ. ಇದಕ್ಕೆ ಸೂಕ್ತ ಚಿಕಿತ್ಸೆ ಕೊಡಿಸುವುದರ ಮೂಲಕ ಕಾಯಿಲೆ ಗುಣಪಡಿಸಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 12 ಜನ ಓಣಿಯ ಮಹಿಳೆಯರು ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.

## “ನವಜೀವನ ಕಾರ್ಯಕ್ರಮದ ಅಡಿಯಲ್ಲಿ, ಫಲಾನುಭವಿಗಳಿಗೆ ಹಾಗೂ ಪೋಷಕರಿಗೆ ಆಪ್ತ ಸಮಾಲೋಚನೆ”



ಆಗಸ್ಟ್ 23 ರಂದು ಹುಮ್ನಾಬಾದ್ ತಾಲೂಕಿನ ಕನಕಟ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಅಡಿಯಲ್ಲಿ, ಫಲಾನುಭವಿಗಳಿಗೆ ಹಾಗೂ ಪೋಷಕರಿಗೆ ಆಪ್ತ ಸಮಾಲೋಚನೆ ಮಾಡಲಾಯಿತು. ಶ್ರೀ ರವಿಕುಮಾರ್ (ಸಹಾಯಕ ಆಪ್ತ ಸಮಾಲೋಚಕರು ಹುಮ್ನಾಬಾದ್ ವಲಯ) ಸುಮಾರು ಐದು ವರ್ಷಗಳಿಂದ ಚಿಕಿತ್ಸೆಯನ್ನು ಪಡೆಯುತ್ತಾ, ಹೈದರಾಬಾದ್, ಗುಲ್ಬರ್ಗ, ಸೋಲಾಪುರ್, ಇತ್ಯಾದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆರ್ಥಿಕ ಪರಿಸ್ಥಿತಿಯಿಂದ ಕುಗ್ಗಿ ಹೋಗಿದ್ದರು. ಮಾನಸಿಕ ಆರೋಗ್ಯದ ಚಿಕಿತ್ಸೆ ಕುರಿತು ಗ್ರಾಮದ ಜನರಿಗೆ ಮಾಹಿತಿ ನೀಡಿದಾಗ, ಸರಕಾರಿ ಆಸ್ಪತ್ರೆ ಹುಮ್ನಾಬಾದ್ ನಲ್ಲಿ ಉಚಿತ ಚಿಕಿತ್ಸೆ ಪಡೆಯಲು ಮುಂದಾಗಿದ್ದಾರೆ. ಅನೇಕ ಕುಟುಂಬಗಳು ಸಮಸ್ಯೆಯಿಂದಾಗಿ ಅನೇಕ ನೋವುಗಳನ್ನು ಅನುಭವಿಸುತ್ತ, ನಿರಂತರ ಮಾತ್ರೆಗಳ ಸೇವನೆಯಿಂದ ಹಾಗೂ ವೈದ್ಯರ ಸಲಹೆ ಸೂಚನೆಗಳು ಮತ್ತು ಆಪ್ತ ಸಮಾಲೋಚನೆಯ ಮುಖಾಂತರ ದಿನನಿತ್ಯದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ಇದ್ದಾರೆ. ಅವರ ಅನೇಕ ಸಮಸ್ಯೆಗಳು ಆಪ್ತಸಮಾಲೋಚನೆಯಲ್ಲಿ ವ್ಯಕ್ತಪಡಿಸುತ್ತಾ, ಅನೇಕ ಹೇಳಿಕೊಳ್ಳದ ನೋವುಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕೊರಗುತ್ತಿದ್ದರು, ಇಂದು ಆಪ್ತ ಸಮಾಲೋಚನೆಯಲ್ಲಿ ಅನೇಕ ವಿಷಯಗಳನ್ನು ಹೇಳಿ ನನ್ನ ಮನಸ್ಸಿಗೆ ಸಮಾಧಾನವಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಆಪ್ತ ಸಮಾಲೋಚನೆಯಿಂದ ನನ್ನ ಮಾನಸಿಕ ಆರೋಗ್ಯದ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ, ನಿರ್ಧಾರ ತೆಗೆದುಕೊಳ್ಳುತ್ತಿದ್ದೇನೆ ಎಂದು ಫಲಾನುಭವಿ ಒಬ್ಬರು ಮಾಹಿತಿ ನೀಡಿದರು. ಪ್ರತಿ ಬುಧವಾರ ವೈದ್ಯರ ಸಂಪರ್ಕದಲ್ಲಿದ್ದೇನೆ, ಹಾಗೂ ಕಾರ್ಯಕರ್ತರು ಶ್ರೀಮತಿ ಮಹಾದೇವಿ ಇವರ ಮೂಲಕ ಮಾಹಿತಿ ಅರಿವನ್ನು ನೀಡುತ್ತಿದ್ದಾರೆ, ಆಪ್ತ ಸಮಾಲೋಚನೆಯಿಂದ ನನ್ನ ಅನೇಕ ಕಷ್ಟದ ಸುಖ ದುಃಖ ವಿಚಾರದಲ್ಲಿ ಸಹಾಯ ನೀಡುತ್ತಿರುವ ನಿಮ್ಮ ಆರ್ಬಿಟ್ ಸೇವಾ ಸಂಸ್ಥೆಗೆ ಚಿರಋಣಿಯಾಗಿರುತ್ತೇನೆ ಎಂದು ಸಂತೋಷವನ್ನು ವ್ಯಕ್ತಪಡಿಸಿದರು.

## "ಮಾನಸಿಕ ಅಸ್ವಸ್ಥರ ಪತ್ತೆ ಹಚ್ಚುವ ಸಮೀಕ್ಷೆ"



ಆಗಸ್ಟ್ 1 ರಂದು ಹುಮ್ನಾಬಾದ್ ತಾಲೂಕಿನ ವರವಟ್ಟಿ ಗ್ರಾಮದಲ್ಲಿ, ಬೆಳಿಗ್ಗೆ 10 ಗಂಟೆಗೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಹಾದೇವಿ ರವರು ಮಾನಸಿಕ ಅಸ್ವಸ್ಥರ ಪತ್ತೆ ಹಚ್ಚುವ ಸಮೀಕ್ಷೆ ಮಾಡಿದರು, ಭೇಟಿ ನೀಡಿದ ಕುಟುಂಬಗಳಿಗೆ ಮಾನಸಿಕ ಅಸ್ವಸ್ಥರ ಕಾಯಿಲೆಯ ಲಕ್ಷಣಗಳನ್ನು ತಿಳಿಸಲಾಯಿತು. ಕಾರಣವಿಲ್ಲದೆ ನಗುವುದು, ದಾರಿಯಲ್ಲಿ ಹೋಗುವವರನ್ನು ಕಂಡು ಕೆಟ್ಟದಾಗಿ ಮಾತನಾಡುವುದು, ಮನೆಯಲ್ಲಿದ್ದ ವಸ್ತುವನ್ನು ಬೀಸಾಡುವುದು, ಕಲ್ಲಿಂದ ಹೊಡೆಯುವುದು, ಇಂತಹ ಲಕ್ಷಣಗಳು ಕಂಡುಬಂದಲ್ಲಿ ಅವರಿಗೆ ಉಚಿತವಾಗಿ ಔಷಧಿ ಮತ್ತು ಚಿಕಿತ್ಸೆ ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಲಭ್ಯವಿದೆ. ಪ್ರತಿ ಬುಧವಾರ ಬೆಳಿಗ್ಗೆ 10 ಗಂಟೆಗೆ ತಜ್ಞ ಮನೋವೈದ್ಯರು ತಪಾಸಣೆ ಮಾಡುತ್ತಾರೆ ಮತ್ತು ಒಂದು ತಿಂಗಳ ಔಷಧಿ ಕೊಡುತ್ತಾರೆ. ಎಂದು ಮಾಹಿತಿ ನೀಡುವ ಮೂಲಕ ಮಾನಸಿಕ ಅಸ್ವಸ್ಥರ ಸಮೀಕ್ಷಾ ಕಾರ್ಯ ಮಾಡಲಾಯಿತು.

## "ರಕ್ತದಾನ ಶಿಬಿರದ ಕುರಿತು ಮಾಹಿತಿ"



ಆಗಸ್ಟ್ 29 ರಂದು ಹುಮ್ನಾಬಾದ್ ನಗರದ ಫಾರ್ಮಸಿ ಕಾಲೇಜಿಗೆ ಭೇಟಿ ನೀಡಿ ಅಲ್ಲಿನ ವಿದ್ಯಾರ್ಥಿಗಳಿಗೆ ಅಗಸ್ಟ್ 03 ರಂದು ನಡೆಯುವ ರಕ್ತದಾನ ಶಿಬಿರದ ಕುರಿತು ಮಾಹಿತಿ ನೀಡಲಾಯಿತು. ನೆತ್ತರ ಹನಿ ಕೊಟ್ಟವನೆ ದಣಿ. ಈ ರಕ್ತದಾನದ ಶಿಬಿರದಲ್ಲಿ ಹೆಚ್ಚಿನ ರೀತಿಯಲ್ಲಿ ಯುವಕರು ಭಾಗವಹಿಸಿ ರಕ್ತದಾನ ಮಾಡಿ ಸಮಾಜಕ್ಕೆ ನಾವು ಪ್ರೇರಣೆ ಆಗಬೇಕು ಎಂದು ಅರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಕಂಠಿಯವರು ಜಾಗೃತಿ ಮೂಡಿಸಿದರು.

## "ಮಾನಸಿಕ ರೋಗದ ಕುರಿತು ಅರಿವು"



ಆಗಸ್ಟ್ 23 ರಂದು ಹುಮನಾಬಾದ್ ನಗರದ ಕ್ರಿಶ್ಚಿಯನ್ ಕಾಲೋನಿಯ ಭವಾನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಮಾನಸಿಕ ರೋಗದ ಕುರಿತು ಅರಿವು ಮೂಡಿಸಲಾಗಿದೆ . ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ ಆದ್ದರಿಂದ ಸಮುದಾಯದಲ್ಲಿ ಯಾರಾದರೂ ಮಾನಸಿಕ ಅಸ್ವಸ್ಥರು ಇದ್ದರೆ ಸಂಸ್ಥೆಯ ಕಾರ್ಯಕರ್ತರಿಗೆ ಮಾಹಿತಿ ನೀಡಿ ಅವರಿಗೆ ಆಪ್ತ ಸಮಲೋಚನೆಯ ಮೂಲಕ ಮನೋವೈದ್ಯರ ಸಂಪರ್ಕಕ್ಕೆ ತೆಗೆದುಕೊಂಡು ಹೋಗಿ ಚಿಕಿತ್ಸೆ ನೀಡಿದರೆ ಅವರು ಗುಣ ಹೊಂದುವ ಸಾಧ್ಯತೆ ಇರುತ್ತದೆ ಎಂದು ಮಾಹಿತಿ ನೀಡಲಾಯಿತು.

# "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## "ಶಿಕ್ಷಣದ ಮಹತ್ವ ಕುರಿತು ಶೀಘ್ರ ಪತ್ತೆ ಹಚ್ಚುವಿಕ್ಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮ"



ಆಗಸ್ಟ್ 21 ರಂದು ಹುಮ್ನಾಬಾದ್ ತಾಲೂಕಿನ ಹಿಲಾಲಪುರ್ ಗ್ರಾಮದಲ್ಲಿ "ಶಿಕ್ಷಣದ ಮಹತ್ವ" ಕುರಿತು ಶೀಘ್ರ ಪತ್ತೆ ಹಚ್ಚುವಿಕ್ಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತೆಯಾದ ಶ್ರೀಮತಿ ಮಮತಾ ರವರು ಮಾಹಿತಿ ನೀಡಿದರು. ಮಕ್ಕಳ ಗುಂಪು ರಚಿಸುವ ಮೂಲಕ, ನಮ್ಮ ಜೀವನಕ್ಕೆ ಶಿಕ್ಷಣ ಬಹಳ ಮುಖ್ಯ. ಶಿಕ್ಷಣ ಈ ಪದ ಇಡೀ ಜಗತ್ತನ್ನು ಬದಲಾಯಿಸಲು ಬಳಸಬಹುದಾದ ಅತ್ಯಂತ ಶಕ್ತಿಶಾಲಿ ಅಸ್ತ್ರ. ಶಿಕ್ಷಣವು ಒಬ್ಬರ ಜೀವನವನ್ನು ಬದಲಾಯಿಸುವ ಪ್ರಮುಖ ಸಾಧನವಾಗಿದೆ. ಶಿಕ್ಷಣವು ಖಂಡಿತವಾಗಿಯೂ ವ್ಯಕ್ತಿಯ ಜೀವನದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಭಾರತದಲ್ಲಿ ಆದಿಕಾಲದಿಂದಲೂ ನಡೆದುಕೊಂಡು ಬಂದ ವ್ಯವಸ್ಥೆ ಅಂದರೆ ಗುರುಕುಲ ಶಿಕ್ಷಣ ವ್ಯವಸ್ಥೆಯು ಜಗತ್ತಿನ ಅತ್ಯಂತ ಪುರಾತನ ಶಿಕ್ಷಣ ವ್ಯವಸ್ಥೆ ಆಗಿದೆ. ಶಿಕ್ಷಣ ನಮ್ಮನ್ನು ವಿನಯವಂತರನಾಗಿ ಮಾಡುತ್ತದೆ, ಶಿಕ್ಷಣವು ಜಾಗೃತಿ ಮೂಡಿಸುತ್ತದೆ ಮತ್ತು ಶಿಕ್ಷಣವು ನಮಗೆ ಜೀವನೋಪಾಯವನ್ನು ಗಳಿಸಲು ಅನುವು ಮಾಡಿಕೊಡುತ್ತದೆ. ಪ್ರತಿಯೊಬ್ಬರ ಜೀವನದಲ್ಲಿ ಯಶಸ್ವಿಯಾಗಲು ಶಿಕ್ಷಣವು ಬಹಳ ಮುಖ್ಯವಾದದ್ದು. ಶಿಕ್ಷಣವು ವ್ಯಕ್ತಿಯನ್ನು ಸ್ವಾವಲಂಬಿಯನಾಗಿ ಮಾಡುತ್ತದೆ, ಇಡೀ ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಶಿಕ್ಷಣವು ಕೊಡುಗೆ ನೀಡುತ್ತದೆ ಎಂದು ಈ ಮಕ್ಕಳ ಗುಂಪಿನಲ್ಲಿ ಚರ್ಚಿಸಿ ಒಂದು ಮಗುವನ್ನು ಶಾಲೆಗೆ ದಾಖಲಾಯಿಸಲಾಯಿತು.

## "ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಪೋಷಕರಿಗೆ ಕಾರ್ಯಕ್ರಮ"



ಆಗಸ್ಟ್ 12 ರಂದು ಹುಮ್ನಾಬಾದ್ ನಗರದ ಅಗಡಿ ಕಾಲೋನಿಯಲ್ಲಿ, ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಪೋಷಕರಿಗೆ ಒಟ್ಟುಗೂಡಿಸಿ ಸಭೆ ಮಾಡಿದರು. ಅಂಗವಿಕಲತೆ ಎಂದರೆ ಒಬ್ಬ ವ್ಯಕ್ತಿಯ ಶಾರೀರಿಕ ಕಾರ್ಯನಿರ್ವಹಣೆ, ಚಲನಶೀಲತೆ, ಕೌಶಲ್ಯ ಅಥವಾ ದೇಹ ಬಲದ ಮೇಲಿರುವ ಮಿತಿ. ಅಂಗವಿಕಲತೆಗಳು ಹುಟ್ಟುವುದಕ್ಕೆ ಮುಂಚೆ ಆಗಿರುತ್ತವೆ. ಇವು ರೋಗಗಳು ಅಥವಾ ಗರ್ಭಾವಸ್ಥೆಯ ಅವಧಿಯಲ್ಲಿ ಭ್ರೂಣ ಬೆಳವಣಿಗೆ ಸಂಬಂಧಿ ಅಪಘಾತಗಳು ಅಥವಾ ಅನುವಂಶೀಯ ಕಾಯಿಲೆಗಳ ಕಾರಣಗಳಿಂದ ಆರಂಭ ಆಗಿರಬಹುದು ಎಂದು ಪೋಷಕರಿಗೆ ತಿಳಿಸಲಾಯಿತು. ರಕ್ತ ಸಂಬಂಧದಲ್ಲಿ ವಿವಾಹ ಮಾಡಿದರೆ ಈ ರೀತಿಯ ಮಕ್ಕಳು ಹುಟ್ಟುವುದು ನೂರಕ್ಕೆ ಎಪ್ಪತ್ತು ಪ್ರತಿಶತವಾಗಿರುತ್ತದೆ, ಆದಕಾರಣ ಪೋಷಕರು ಈ ಕುರಿತು ಗಮನಹರಿಸುವಂತೆ ತಿಳಿಸಲಾಯಿತು. ಸಂಸ್ಥೆಯ ಕಡೆಯಿಂದ ಮಕ್ಕಳಿಗೆ ಪೋಷ್ಠಿಕಾಂಶದ ಆಹಾರ, ಯು,ಡಿ,ಐ,ಡಿ ಕಾರ್ಡ್ ಸಾಕಷ್ಟು ಮಕ್ಕಳಿಗೆ ಮಾಡಿಸಿಕೊಡಲಾಗಿದೆ. ಸಂಸ್ಥೆಯ ಕಡೆಯಿಂದ ಮಕ್ಕಳ ಭವಿಷ್ಯವನ್ನು ರೂಪಿಸಿಕೊಳ್ಳಲು ಸ್ಟ್ಯಾಂಡಿಂಗ್ ಫ್ರೇಮ್, ವಿತರಣೆ ಮಾಡಲಾಗಿದೆ. ಅದಕ್ಕೋಸ್ಕರ ಪೋಷಕರು ಮಕ್ಕಳ ಕಡೆ ಹೆಚ್ಚಿನ ಗಮನವನ್ನು ಕೊಡುವುದರ ಜೊತೆಗೆ ಕಾರ್ಯಕರ್ತರಿಗೆ ಸಹಾಯಕರಾಗಿ ನಿಂತುಕೊಳ್ಳಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ನೀಡಲಾದ ಮಾಹಿತಿಯನ್ನು ತೆಗೆದುಕೊಂಡು, ಪೋಷಕರು ಆರ್ಬಿಟ್ ಸಂಸ್ಥೆಯವರು ಉತ್ತಮವಾದ ಕೆಲಸವನ್ನು ಮಾಡುತ್ತಿದ್ದೀರಿ, ನಮ್ಮ ಮಕ್ಕಳ ಭವಿಷ್ಯಕ್ಕೆ ದಾರಿದೀಪವಾಗಿ ನಿಂತಿದಿರ ಎಂದು ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳನ್ನು ವ್ಯಕ್ತಪಡಿಸಿದ್ದಾರೆ.



# "ಮಹಿಳಾ ಸಬಲೀಕರಣ ಕಾರ್ಯಕ್ರಮ"

## "ಮಾಧ್ಯಮ ಶಿಕ್ಷಣದ ಕುರಿತು ತರಬೇತಿ"



ಆಗಸ್ಟ್ 12 ರಂದು ಭಾಲ್ಕಿ ತಾಲೂಕಿನ ಡೊಂಣಗಾಪುರ ಗ್ರಾಮದಲ್ಲಿ ಸ್ಥಳೀಯ ಸಂಯೋಜಕರಾದ ಫಾದರ್ ಜಾರ್ಜ್ ಮತ್ತು ಬ್ರದರ್ ರೇಜಿ ಅವರು ಮಾಧ್ಯಮ ಶಿಕ್ಷಣದ ಕುರಿತು ತರಬೇತಿ ನೀಡಿದರು, ಮಾಧ್ಯಮ ಶಿಕ್ಷಣ ಎಂದರೆ ಟಿವಿ, ರೇಡಿಯೋ, ಕಂಪ್ಯೂಟರ್, ಮೊಬೈಲ್ ಬಳಕೆ ಇತ್ಯಾದಿ, ಟಿವಿಯಲ್ಲಿ ದೃಶ್ಯ ಹಾಗೂ ಶಬ್ದವನ್ನು ಕೇಳುತ್ತೇವೆ, ಯಾವುದೇ ವಿಷಯವು ಅತಿ ಬೇಗ ತಿಳಿಯುತ್ತದೆ. ಸುದ್ದಿ ಆಗಿರಬಹುದು ಅನೇಕ ಪ್ರಸ್ತುತ ವಿಷಯಗಳು ತಿಳಿಯುತ್ತವೆ ಮತ್ತು ರೇಡಿಯೋದಲ್ಲಿ ದೇಶದಲ್ಲಿನ ಹಾಗೂ ವಿದೇಶದ ಹಲವಾರು ಸುದ್ದಿಗಳು, ಕೆಲಸ ಮಾಡುವಾಗ ಊಟ ಮಾಡುವಾಗ ಯಾವುದೇ ಸಂದರ್ಭದಲ್ಲಿ ನಾವು ಕಿವಿಯ ಮುಖಾಂತರ ಕೇಳಬಹುದಾಗಿದೆ. ಕಂಪ್ಯೂಟರ್ ಒಂದು ಯಂತ್ರವಾಗಿದೆ ಮನುಷ್ಯನ ಮೆದುಳಿನಲ್ಲಿ ಇಟ್ಟುಕೊಳ್ಳಲಾಗದ ಹಲವಾರು ವಿಷಯಗಳನ್ನು ಕಂಪ್ಯೂಟರ್ ನಲ್ಲಿ ಇಟ್ಟುಕೊಳ್ಳುವುದು. ಮತ್ತು ಯಾವುದೇ ಅರ್ಜಿಯಾಗಲಿ ರೇಷನ್ ಕಾರ್ಡ್, ಆಧಾರ್ ಕಾರ್ಡ್, ಇಸ್ರಾಮ್ ಕಾರ್ಡ್, ಇತರ ಪ್ರತಿಯೊಂದು ಕೆಲಸವೂ ಅಂತರ್ಜಾಲದ ಮುಖಾಂತರ ಮಾಡುತ್ತದೆ. ನಾವು 21ನೆಯ ಶತಮಾನದಲ್ಲಿ ಹೆಚ್ಚಾಗಿ ಮಾಧ್ಯಮ ಶಿಕ್ಷಣದ ಬಗ್ಗೆ ಅರಿತುಕೊಳ್ಳಬೇಕು ಎಂದು ಮಾಹಿತಿ ನೀಡಿದರು. ಒಟ್ಟು 37 ಸದಸ್ಯರು ಮಾಧ್ಯಮದ ಶಿಕ್ಷಣದ ಬಗ್ಗೆ ಅರಿತುಕೊಂಡರು, 20 ಸದಸ್ಯರು ಟಿವಿ ಯಲ್ಲಿ ವಾರ್ತೆಗಳನ್ನು ನೋಡುವುದಾಗಿ ಒಪ್ಪಿಕೊಂಡಿದ್ದಾರೆ, 05 ಸದಸ್ಯರು ಕಂಪ್ಯೂಟರ್ ಬಳಸುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ, ಕೆಲವರು ರೇಡಿಯೋ ಮುಖಾಂತರ ಹಲವಾರು ವಿಷಯಗಳನ್ನು ತಿಳಿದುಕೊಳ್ಳುತ್ತೇವೆ ಎಂದು ತಿಳಿಸಿದರು.

## "ಸರಕಾರದ ಯೋಜನೆಗಳ ಕುರಿತು ಮಾಹಿತಿ"



ಆಗಸ್ಟ್ 18 ರಂದು ಬೋರಗಿ ಗ್ರಾಮದಲ್ಲಿ ಸರಕಾರದ ಯೋಜನೆಗಳ ಕುರಿತು ಮಾಹಿತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಯು.ಡಿ.ಐ.ಡಿ ಕಾರ್ಡ್, ಈ ಶ್ರಮ ಕಾರ್ಡ್, ವೋಟರ್ ಐಡಿ ಕಾರ್ಡ್, ಲೇಬರ್ ಕಾರ್ಡ್, ಮಾಡಿಸುವುದರ ಕುರಿತು ಮಾಹಿತಿಯನ್ನು ತಿಳಿಸಲಾಯಿತು. ಕಾರ್ಯಕ್ರಮದಲ್ಲಿ ಫಾದರ್ ಕ್ಲೀವನ್ ಗೋಮ್ಸ್, ಸಿಸ್ಟರ್ ಶೋಭಾ, ಆರ್ಬಿಟ್ ಸಂಸ್ಥೆ ಕೌಶಲ್ಯ ತರಬೇತಿ ಯೋಜನೆಯ ಸಂಯೋಜಕರಾದ ಸುಭಾಷ್ ಮಾನಕರೆ ಹಾಗೂ ಗ್ರಾಮಸ್ಥರು ಸೇರಿ 40 ಜನರು ಭಾಗವಹಿಸಿದ್ದರು. ಇದರಲ್ಲಿ ಮೂರು ಹೊಸ ವೋಟರ್ ಐಡಿ ಕಾರ್ಡ್‌ಗಳು, ಹಾಗೂ ಎರಡು ಲೇಬರ್ ಕಾರ್ಡ್ ರಿನಿವಲ್ ಮಾಡುವ ದಾಖಲಾತಿಯನ್ನು ಪಡೆದುಕೊಳ್ಳಲಾಯಿತು.

## “ನಿರ್ದಿಷ್ಟವಾದ ಗುರಿ ಮತ್ತು ಉದ್ದೇಶಗಳ ಸಾಧನೆಗೆ ಸಕ್ರಿಯವಾಗಿ ಸುವ್ಯವಸ್ಥಿತ ರೀತಿಯಲ್ಲಿ ಶ್ರಮಿಸುವ ಮಹಿಳೆಯರಾಗಬೇಕು”



ಆಗಸ್ಟ್ 8 ರಂದು ಶ್ರೀಮತಿ ಸವಿತಾ ರವರು ಹುಡುಗಿ ಗ್ರಾಮದ ಕ್ರಿಶ್ಚಿಯನ್ ಓಣಿಯಲ್ಲಿ ಹೊಸದಾಗಿ ಮಹಿಳಾ ಸ್ವ-ಸಹಾಯ ಸಂಘ ರಚನೆ ಮಾಡಲು, ಸಂಘದ ಗುರಿ ಉದ್ದೇಶಗಳ ಕುರಿತು ಮಹಿಳೆಯರಿಗೆ ತಿಳಿಸಲಾಯಿತು. ಸ್ವ-ಸಹಾಯ ಸಂಘವು ರಚನೆ ಮಾಡಬೇಕಾದರೆ ಆಸಕ್ತಿಯುಳ್ಳ ಮಹಿಳೆಯರು 10 ರಿಂದ 20 ಒಡ ಸಾಮಾನ್ಯ ಮಹಿಳೆಯರಾಗಿರಬೇಕು. ನಿರ್ದಿಷ್ಟವಾದ ಗುರಿ ಮತ್ತು ಉದ್ದೇಶಗಳ ಸಾಧನೆಗೆ ಸಕ್ರಿಯವಾಗಿ ಸುವ್ಯವಸ್ಥಿತ ರೀತಿಯಲ್ಲಿ ಶ್ರಮಿಸುವ ಮಹಿಳೆಯರ ಗುಂಪಾಗಿರಬೇಕು. ಸಂಘದ ಸದಸ್ಯರ ಮತ್ತು ಅವರ ಕುಟುಂಬವು ಮುಂದಿನ ದಿನಗಳಲ್ಲಿ ಸರ್ವೋತ್ತಮುಖ ಅಭಿವೃದ್ಧಿ ಆಗಬೇಕು. ಮಹಿಳೆಯರಲ್ಲಿ ಅರಿವು ಮತ್ತು ಸಂಘಟನೆ. ಸ್ವ-ಸಹಾಯ, ಪರಸ್ಪರ ಸಹಾಯ, ಸಮಸ್ಯೆಗಳ ಪರಿಹಾರ, ಸ್ವಾವಲಂಬಿ ಬದುಕು, ಸಮುದಾಯ ಮತ್ತು ಗ್ರಾಮದ ಅಭಿವೃದ್ಧಿಯಾಗಬೇಕು. ಉಳಿತಾಯ ಮಾಡುವುದರೊಂದಿಗೆ ಮಹಿಳೆಯರು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಮತ್ತು ಪರಿಸರದಲ್ಲಿಯೂ ನಾಯಕತ್ವ ಜವಾಬ್ದಾರಿ ತೆಗೆದುಕೊಳ್ಳಬೇಕು. ಸದಸ್ಯರ ಸಮಸ್ಯೆಗಳನ್ನು ಸಾಧ್ಯವಾದಷ್ಟು ಪರಿಹರಿಸಿಕೊಳ್ಳುವಲ್ಲಿ ಪ್ರಯತ್ನಿಸಿ, ಕ್ರಿಯಾತ್ಮಕ ಪರಿಹಾರ ಮಾರ್ಗವನ್ನು ಹುಡುಕಬೇಕು. ನಾವೆಲ್ಲರೂ ಒಂದೇ ಕುಟುಂಬ ಎನ್ನುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು, ಹೊಸದಾಗಿ ಸಂಘ ರಚಿಸಲು ಬಂದ ಮಹಿಳೆಯರಿಗೆ ತಿಳಿಸಲಾಯಿತು.

## “ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆಯ ತರಬೇತಿ”



ಆಗಸ್ಟ್ 13 ರಂದು ಧಾರವಾಡ ಜಿಲ್ಲೆಯಲ್ಲಿ ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಗಳಾದ ನಿರ್ದೇಶಕರು ಫಾದರ್ ಪೀಟರ್ ಮತ್ತು ಫಾದರ್ ಅರುಣ್ ರವರು ‘ಸಂವಹನ ಕಲೆ’ ಅದರ ಉದ್ದೇಶ ಮತ್ತು ಗುಣಲಕ್ಷಣಗಳ ಬಗ್ಗೆ ಸಂದರ್ಶನ ಹರ್ಷದಿಂದ ಕೇಳುವುದು ಮತ್ತು ಆಲಿಸುವಿಕೆ ಎಲ್ಲವೂ ಕೂಡ ಸಮಾಜಸೇವಕರಿಗೆ ತೊಂದರೆ ಅಡೆತಡೆಗಳು ಆಲಿಸುವಿಕೆ ಯಾವ ಪರಿಣಾಮವನ್ನು ಕೊಡಬೇಕು ಎಂಬುದು ಇಷ್ಟವಾದ ಊಟ, ಇಷ್ಟವಾದ ಸ್ಥಳ; ಭಯ, ನಂಬಿಕೆ ಇದ್ದರೆ ಮಾತ್ರ ಸಂವಹನ ಆಗುತ್ತದೆ ಮಾಹಿತಿಯನ್ನು ಮತ್ತು ಸರಳವಾಗಿ ಗುರ್ತಿಸುವಂಥ ಸಾಧನವಾಗಿದೆ ಸಾವಿರಾರು ಜನರಿಗೆ ವಿಷಯವನ್ನು ತಲುಪಿಸುವಂತಹದಾಗಿದೆ ಎಂಬುವುದರ ಕುರಿತು ಮಾಹಿತಿಯನ್ನು ನೀಡಿದರು. ಈ ತರಬೇತಿಯಲ್ಲಿ ಒಟ್ಟು 40 ಸದಸ್ಯರು ಸಂಘದ ಮಹಾಸಂಗದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯರು ಭಾಗವಹಿಸಿದ್ದರು.

## “ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ”

ಆಗಸ್ಟ್ 21 ರಂದು ಔರಾದ್ ತಾಲೂಕಿನ ಉಜಿನಿ ಗ್ರಾಮದ ಪ್ರೇಮಾಂಜಲಿ ಪ್ರೌಢ ಶಾಲೆಯಲ್ಲಿ ಕ್ಯಾನ್ಸರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಸಿಸ್ಟರ್ ಕವಿತಾ, ಸಿಸ್ಟರ್ ಪ್ರಿಯಾಂಕ, ಆರ್ಬಿಟ್ ಸಂಸ್ಥೆಯ ಕೌಶಲ್ಯ ಅಭಿವೃದ್ಧಿ ತರಬೇತಿಯ ಸಂಯೋಜಕರಾದ ಶ್ರೀ ಸುಭಾಷ ಮಾನಕರೆ ಹಾಗೂ ಶಿಕ್ಷಕರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕ್ಯಾನ್ಸರ್‌ನ ವಿಧಗಳು, ಕ್ಯಾನ್ಸರ್‌ನ ಲಕ್ಷಣಗಳು ಹಾಗೂ ಕ್ಯಾನ್ಸರ್ ತಡೆಗಟ್ಟುವ ವಿಧಾನಗಳ ಕುರಿತು ಮಾಹಿತಿಯನ್ನು ನೀಡಿ, ಈ ಮಾಹಿತಿಯನ್ನು ತಮ್ಮ ಕುಟುಂಬದ ಸದಸ್ಯರೊಂದಿಗೆ ಹಾಗೂ ನೆರೆಹೊರೆಯವರ ಜೊತೆಗೆ ಹಂಚಿಕೊಳ್ಳುವಂತೆ ಸುಭಾಷ್ ಮಾನಕರೆ ಅವರು ಮಕ್ಕಳಿಗೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಒಟ್ಟು 120 ಮಕ್ಕಳು ಹಾಗೂ ಎಂಟು ಜನ ಶಿಕ್ಷಕರು ಭಾಗವಹಿಸಿದ್ದರು.





## “ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆ ಕುರಿತು ತರಬೇತಿ”



ಆಗಸ್ಟ್ 9 ರಂದು ಚಿಟಗುಪ್ಪ ತಾಲೂಕಿನ ಮುದ್ದನಾಳ ಗ್ರಾಮದಲ್ಲಿ ತುಳಸಿ ಮತ್ತು ಮೇರಿ ಸಂಘದ ಸದಸ್ಯರಿಗೆ ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆಯಾದ ಶ್ರೀಮತಿ ರೀಟಾ, ಒಂದು ಸಂದೇಶವನ್ನು ನೀಡಿ ಗುಂಪಿನ ಸದಸ್ಯರಿಗೆ ಒಬ್ಬರ ಕಿವಿಯಿಂದ ಇನ್ನೊಬ್ಬರಿಗೆ ರವಾನಿಸಲು ತಿಳಿಸಿದರು. ಕೊನೆಯ ಸದಸ್ಯರ ತನಕ ಬರುವ ಸಂದೇಶ ಯಾವುದು ಎಂದು ತಿಳಿದುಕೊಂಡು ಆ ವಿಷಯದ ಮೇಲೆ ವಿಮರ್ಶಿಸುತ್ತಾ ಸಂವಹನ ಎಂದರೆ ಅನಿಸಿಕೆ ಭಾವನೆಗಳನ್ನು ವ್ಯಕ್ತಪಡಿಸುವುದು ಎಂದು ತಿಳಿಸಿದರು. ಚಟುವಟಿಕೆಯ ಮೂಲಕ ಸದಸ್ಯರ ಗಮನವನ್ನು ಸೆಳೆಯಲಾಯಿತು. ಈ ತರಬೇತಿಯಲ್ಲಿ 26 ಮಹಿಳೆಯರು ಭಾಗವಹಿಸಿ ಸಂವಹನ ಕಲೆ ಕುರಿತು ತರಬೇತಿಯನ್ನು ಪಡೆದುಕೊಂಡರು.



## “ಜನ ಜಾಗೃತಿ ತಾಲೂಕ ಒಕ್ಕೂಟ ಸಭೆ”



ಆಗಸ್ಟ್ 21 ರಂದು ಭಾಲ್ಕಿ ತಾಲೂಕಿನ ಜನ ಜಾಗೃತಿ ತಾಲೂಕ ಒಕ್ಕೂಟ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಆ ಸಭೆಗೆ ಸಂಪನ್ಮೂಲ ವ್ಯಕ್ತಿಯಾದ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕ ಮತ್ತು ಮಹಿಳಾ ಸಬಲೀಕರಣದ ಸಂಯೋಜಕರಾದ ಶ್ರೀಮತಿ ನಿರ್ಮಲಾ ರವರು ತಾಲೂಕ ಒಕ್ಕೂಟ ಕುರಿತು, ತಾಲೂಕು ಒಕ್ಕೂಟದ ಗುರಿ ಮತ್ತು ಉದ್ದೇಶಗಳ ಕುರಿತು ವಿವರಿಸಿದರು. ಏಪ್ರಿಲ್ 2026ರ ಅಂತ್ಯದೊಳಗೆ ಕರ್ನಾಟಕದಲ್ಲಿನ 768 ಹಳ್ಳಿಗಳಿಂದ ಕರ್ತವ್ಯ ಬದ್ಧ ಅರ್ಪಣಾ ಮನೋಭಾವದ 7,500 ನಾಯಕಿಯರು ಸಾಮಾಜಿಕ ಆರ್ಥಿಕ, ರಾಜಕೀಯ, ಸಂಸ್ಕೃತಿಕ, ತಾಂತ್ರಿಕ ಹಾಗೂ ಪರಿಸರ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವುದರ ಮೂಲಕ, ಹಿಂದುಳಿದ 7,0000 ಬಡ ಮಹಿಳೆಯರು ಮತ್ತು ಅವರ ಕುಟುಂಬದವರು ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಮಾಹಿತಿ ನೀಡಿದರು. ಈ ಸಭೆಯಲ್ಲಿ ಒಟ್ಟು 28 ಪದಾಧಿಕಾರಿಗಳು ಭಾಗವಹಿಸುವ ಮೂಲಕ ಹಾಗೂ 10 ಮಹಿಳೆಯರು ಸಾಮಾಜಿಕ ಆರ್ಥಿಕದಲ್ಲಿರುವ ಸ್ಥಿತಿಗತಿಗಳನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ನಿರ್ಧರಿಸಿದ್ದಾರೆ. ಮಹಿಳಾ ಸಬಲೀಕರಣದ ಸೂಚಿ 6,000 ಸಮರ್ಥ ಮಹಿಳೆಯರು, ನಾಯಕಿಯರು ಸಾಮಾಜಿಕ, ಆರ್ಥಿಕ, ರಾಜಕೀಯ, ಸಂಸ್ಕೃತಿಕ ಹಾಗೂ ಪರಿಸರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. 2 ಮಹಿಳೆಯರು ಸರ್ಕಾರದ ಯೋಜನೆಗಳನ್ನು ಮತ್ತು ಹಕ್ಕು ಭಾದ್ಯತೆಗಳನ್ನು ಪಡೆಯುತ್ತಿದ್ದಾರೆ.

## “ನೊಂದ ಮಹಿಳೆಗೆ ದಾರಿ ತೋರಿದ ಆರ್ಬಿಟ್ ಸಂಸ್ಥೆ”



ನಿಂಬೂರ ಗ್ರಾಮದ ವಿಜಯ ಸ್ವ-ಸಹಾಯ ಸಂಘದ ಮಹಿಳೆ ಗೋದಾವರಿ, ಸುಮಾರು 15 ವರ್ಷಗಳಿಂದ ಆರ್ಬಿಟ್ ಸಂಸ್ಥೆಯ ಸಂಘದಲ್ಲಿ ಸಕ್ರಿಯವಾಗಿದ್ದು, ಇವರಿಗೆ ಸುಮಾರು ಆರು ತಿಂಗಳಿನಿಂದ ರೈತ ಸನ್ಮಾನ ನಿಧಿ, ವೃದ್ಧಾಪ್ಯ ವೇತನ ಹಾಗೂ ಗ್ರಹ ಲಕ್ಷ್ಮಿ ಯೋಜನೆಯಿಂದ ಬರಬೇಕಾದ ಹಣ ಬಂದಿರುವುದಿಲ್ಲ. ಈ ವಿಷಯದ ಕುರಿತು ಗೋದಾವರಿಯವರು ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆ ಶ್ರೀಮತಿ ಅಮಿತಾ ಅವರ ಗಮನಕ್ಕೆ ತಂದಾಗ, ಈ ವಿಷಯದ ಕುರಿತು ಕುಲಂಕುಶವಾಗಿ ಪರಿಶೀಲಿಸಿ, ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ, ಸಮಸ್ಯೆಯ ಕುರಿತು ಮನವರಿಕೆ ಮಾಡಿಕೊಡಲಾಯಿತು. ಸ್ಥಳೀಯ ಅಂಚೆ ಕಚೇರಿಗೆ ಭೇಟಿ ನೀಡಿ ವರಿಷ್ಠ ಅಧಿಕಾರಗಳೊಂದಿಗೆ ಚರ್ಚಿಸಿ, ಗೋದಾವರಿಯವರ ಹೆಸರಿನ ಹೊಸ ಖಾತೆ ತೆರೆಯಲಾಯಿತು. ಪ್ರಸ್ತುತ ಎರಡು ತಿಂಗಳಿನಿಂದ ರೈತ ಸನ್ಮಾನ ನಿಧಿ, ವೃದ್ಧಾಪ್ಯ ವೇತನ ಹಾಗೂ ಗೃಹಲಕ್ಷ್ಮಿ ಯೋಜನೆಯಿಂದ ನೇರವಾಗಿ ಅಂಚೆ ಖಾತೆಗೆ ಹಣ ಬರುತ್ತಿದೆ ಎಂದು ಫಲಾನುಭವಿ ಮಾಹಿತಿ ನೀಡಿರುತ್ತಾರೆ. ನನ್ನ ಸಮಸ್ಯೆಗೆ ಸ್ಪಂದಿಸಿ ಸೂಕ್ತ ಪರಿಹಾರ ನೀಡಿದ ಆರ್ಬಿಟ್ ಸಂಸ್ಥೆ ಹಾಗೂ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆಯಾದ ಶ್ರೀಮತಿ ಅಮಿತಾ ಅವರಿಗೆ ಗೋದಾವರಿಯವರು ತುಂಬು ಹೃದಯದ ಧನ್ಯವಾದಗಳು ತಿಳಿಸಿದ್ದಾರೆ.

## "ವನಮೋತ್ಸವ ಕಾರ್ಯಕ್ರಮದ ಪ್ರಯುಕ್ತವಾಗಿ ಸಸಿಯನ್ನು ನೆಡುವ ಕಾರ್ಯಕ್ರಮ"





ಆಗಸ್ಟ್ 5 ರಂದು ಚಿಟಗುಪ್ಪ ತಾಲೂಕಿನ ಸೀತಾಳಗೇರಾ ಗ್ರಾಮದಲ್ಲಿ ಶ್ರೀಮತಿ ಅಮಿತಾ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರು, ಆರ್ಬಿಟ್ ಸಂಸ್ಥೆ ವತಿಯಿಂದ ವನಮೋತ್ಸವ ಕಾರ್ಯಕ್ರಮದ ಪ್ರಯುಕ್ತವಾಗಿ ಸಸಿಯನ್ನು ನೆಡುವ ಮೂಲಕ, ಅಂಗನವಾಡಿ ಕೇಂದ್ರದಲ್ಲಿ, ಕಿತ್ತೂರು ಮಹಾಸಂಗದ ಮಹಿಳೆಯರಿಗೆ ಸಸಿಗಳನ್ನು ವಿತರಿಸುವ ಮುಖಾಂತರ ಪರಿಸರ ಸಂರಕ್ಷಣೆ ಮಾಡಬಹುದು ಎಂದು ಪರಿಸರದ ಮಹತ್ವದ ಕುರಿತು ಮನವರಿಕೆ ಮಾಡಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಅಂಗನವಾಡಿಯ ಶಿಕ್ಷಕರು ಹಾಗೂ ಸಹಾಯಕರು ಮತ್ತು ಮಹಾಸಂಗದ ಮಹಿಳೆಯರು ಮತ್ತು ಮಕ್ಕಳು ಭಾಗವಹಿಸಿ ಪರಿಸರ ಸಂರಕ್ಷಣೆಯ ಕುರಿತು ಹಾಗೂ ಅದರ ಮಹತ್ವವನ್ನು ಕುರಿತು ಅರಿತುಕೊಂಡರು. ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ವತಿಯಿಂದ ಒಟ್ಟು 65 ಸಸಿಗಳನ್ನು ವಿತರಣೆ ಮಾಡಲಾಯಿತು.

## "ಸ್ವಉದ್ಯೋಗದಲ್ಲಿ ಜೀವನ ಕಂಡುಕೊಂಡ ಮಹಿಳೆ"

ಶ್ರೀಮತಿ ಸುಭದ್ರ ಗಂಡ ಬಸವರಾಜ್ ಇವರು ಚಟುಗುಪ್ಪ ಪಟ್ಟಣದ ಬಾಳಬ ಏರಿಯಾದಲ್ಲಿ ವಾಸವಾಗಿರುತ್ತಾರೆ. ಇವರಿಗೆ ಸಂಘದಲ್ಲಿ ಸೇರಲು ತುಂಬಾ ಆಸಕ್ತಿ ಇದ್ದು ಭವಾನಿ ಮಾತ ಸಂಘದಲ್ಲಿ ಸೇರಿಕೊಂಡು ಅಧ್ಯಕ್ಷರಾಗಿ ಕೆಲಸ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಘದಲ್ಲಿ ವೈಯಕ್ತಿಕ ಸಾಲ ಹಾಗೂ ಸಮೃದ್ಧಿ ಯೋಜನೆಯಿಂದ 25,000 ಸಾಲವನ್ನು ತೆಗೆದುಕೊಂಡು ತಮ್ಮ ಕುಟುಂಬ ಜೀವನ ನಡೆಸುವುದರ ಜೊತೆಗೆ ತರಕಾರಿ ಅಂಗಡಿಯನ್ನು ಹಾಕಿಕೊಂಡು ಸ್ವಉದ್ಯೋಗದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇದರಿಂದ ಬಂದ ಆದಾಯದಿಂದ ಮಕ್ಕಳ ಶಿಕ್ಷಣ ಕುಟುಂಬ ಜೀವನ ನಡೆಸಿಕೊಂಡು ಸಂತೋಷದಿಂದ ವಾಸಿಸುತ್ತಿದ್ದಾರೆ. ಹಾಗಾಗಿ ಸಂಘ ಸೇರಲು ಸಹಾಯ ಮಾಡಿದ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ರೀಟಾ ಹಾಗೂ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ.



## "ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ"

## "ಅಂಗನವಾಡಿ ಕೇಂದ್ರದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ"

ಆಗಸ್ಟ್ 13 ರಂದು ಬಿಜಲಗಾವ್ ತಾಂಡದ ಅಂಗನವಾಡಿ ಕೇಂದ್ರದಲ್ಲಿ ಅರ್ಬೀಟ್ ಸಂಸ್ಥೆಯ ಕಾರ್ಯಕರ್ತರಾದ ಬಬನ್ ರಾಥೋಡ್ ಅವರು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು. ಮಾನಸಿಕ ಆರೋಗ್ಯ ಮಾನಸಿಕ ಅಸ್ವಸ್ಥತೆ ಮಾನಸಿಕ ಅಸ್ವಸ್ಥತೆಯ ಲಕ್ಷಣಗಳಾದ ಏಕಾಂತ, ಯಾವುದೇ ಕಾರಣವಿಲ್ಲದೆ ನಗುವುದು, ಕಾರಣವಿಲ್ಲದೆ ಅಳುವುದು, ಅವಿವೇಕದ ಅನುಮಾನ ಕಿವಿಗಳಲ್ಲಿ ಅಪರಿಚಿತ ಶಬ್ದಗಳು ಕೇಳಿಸುವುದು. ಮಾನಸಿಕ ಅಸ್ವಸ್ಥತೆಯ ಕಾರಣಗಳಾದ ಬಾಲ್ಯದ ಕಹಿ ನೆನಪುಗಳು ಋಣಭಾರ ನಿಲುವು ಕಳೆದುಕೊಳ್ಳುವುದು, ಆಕಸ್ಮಿಕ ಅಪಘಾತಗಳು ಇತ್ಯಾದಿಗಳ ಕುರಿತು ವಿವರಣೆಯನ್ನು ನೀಡಿದರು. ದೆವ್ವ ಮಾಟ ಮಂತ್ರಗಳು ಮಾನಸಿಕ ಅಸ್ವಸ್ಥತೆಯ ಲಕ್ಷಣಗಳ ಮೇಲೆ ಕಂಡುಬರುತ್ತವೆ ಎಂಬ ಮೂಢನಂಬಿಕೆಯೂ ಸಮಾಜದ ಮೇಲಿದೆ. ಮೇಲಿನ ಲಕ್ಷಣವುಳ್ಳ ವ್ಯಕ್ತಿಗಳು ಕಂಡು ಬಂದಲ್ಲಿ ಮನೋವೈದ್ಯರನ್ನು ಸಂಪರ್ಕಿಸುವ ಮೂಲಕ ಸೂಕ್ತ ಚಿಕಿತ್ಸೆಯನ್ನು ಪಡೆಯುವಂತೆ ತಿಳಿಸಿದರು.



## “ದೈನಂದಿನ ಚಟುವಟಿಕೆಯ ತರಬೇತಿ”



ಭಾಲ್ಕಿ ತಾಲೂಕಿನ ಕಾಸರತೂಗಾವ್ ಗ್ರಾಮದಲ್ಲಿ ಆಗಸ್ಟ್ 21 ರಂದು ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಅಡಿಯಲ್ಲಿ ದೈನಂದಿನ ಚಟುವಟಿಕೆಯ ತರಬೇತಿ ಆಯೋಜಿಸಲಾಯಿತು. ಈ ತರಬೇತಿಯಲ್ಲಿ ಮಾನಸಿಕ ಅಸ್ವಸ್ಥರ ಕುಟುಂಬದ ಸದಸ್ಯರು ಭಾಗವಹಿಸಿ ದೈನಂದಿನ ಚಟುವಟಿಕೆಯ ಮುಖಾಂತರ ಕುಟುಂಬದ ಸದಸ್ಯರಿಗೆ ಮಾನಸಿಕ ಅಸ್ವಸ್ಥರನ್ನು ಹೇಗೆ ನೋಡಿಕೊಳ್ಳಬೇಕು ಮತ್ತು ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಅವರನ್ನು ಹೇಗೆ ತೊಡಗಿಸಿಕೊಳ್ಳಬೇಕು ಎಂದು ವಿವರಿಸಿದರು. ದೈನಂದಿನ ಚಟುವಟಿಕೆಗಳ ಮುಖಾಂತರ ಮಾನಸಿಕ ಅಸ್ವಸ್ಥರನ್ನು ಕಾಯಿಲೆಯಿಂದ ಮುಕ್ತಗೊಳಿಸುವ ಕುರಿತು ವಿವರಿಸಿದರು. ಮಾತ್ರೆಗಳನ್ನು ಸರಿಯಾದ ಸಮಯಕ್ಕೆ ನೀಡುವುದು. ದೈನಂದಿನ ಚಟುವಟಿಕೆಗಳನ್ನು ಸಲಹೆ ಸೂಚನೆಗಳ ಮೂಲಕ ಮಾನಸಿಕ ಅಸ್ವಸ್ಥರನ್ನು ಮುಖ್ಯ ವಾಹಿನಿಗೆ ತರುವ ಕುರಿತು ವಿವರಿಸಿದರು. ಮೇಲೆ ತಿಳಿಸಲಾದ ಎಲ್ಲಾ ಚಟುವಟಿಕೆಗಳನ್ನು ಮಾಡಿಸುವ ಮೂಲಕ ಮಾನಸಿಕ ಕಾಯಿಲೆಯಿಂದ ಶೀಘ್ರವಾಗಿ ಗುಣಪಡಿಸಬಹುದೆಂದು ಸಲಹೆ ನೀಡಿದರು.

## “ಕ್ಯಾನ್ಸರ್ ಮತ್ತು ಮಾನಸಿಕ ಅಸ್ವಸ್ಥ ಕಾಯಿಲೆಯ ಕುರಿತು ಜಾಗೃತಿ”



ಆಗಸ್ಟ್ 14 ರಂದು ಹೆಡ್ಗಾಪುರ್ ಗ್ರಾಮದ ಸಂತ ಪೌಲ್ ಮೆಥಡಿಸ್ಟ್ ಚರ್ಚ್ ಅಂಗಳದಲ್ಲಿ ಆರ್ಬಿಟ್ ಸಂಸ್ಥೆಯ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಯೋಹಾನ್ ರವರು ಕ್ಯಾನ್ಸರ್ ಮತ್ತು ಮಾನಸಿಕ ಅಸ್ವಸ್ಥ ಕಾಯಿಲೆಯ ಕುರಿತು ಜಾಗೃತಿ ಮೂಡಿಸಿದರು. ಮಾನಸಿಕ ಕಾಯಿಲೆಗೆ ತುತ್ತಾಗಲು ಕಾರಣ ಜೀವನದಲ್ಲಿ ಯಾವುದೋ ಒಂದು ಕಹಿ ಘಟನೆಯಿಂದ ಈ ಕಾಯಿಲೆಗೆ ಗುರಿಯಾಗುತ್ತಾರೆ. ಈ ಕಾಯಿಲೆಯನ್ನು ಪತ್ತೆ ಹಚ್ಚಿ ಸೂಕ್ತವಾದ ಚಿಕಿತ್ಸೆ ನೀಡಿದರೆ ಆ ವ್ಯಕ್ತಿ ಗುಣಮುಖವಾಗಬಹುದು ಎಂದು ತಿಳಿಸಿದರು. ಅದೇ ರೀತಿ ಕ್ಯಾನ್ಸರ್ ಕಾಯಿಲೆಯ ಕುರಿತು ವಿವರಿಸುತ್ತಾ ಮನುಷ್ಯನ ಯಾವುದೇ ಭಾಗದಲ್ಲಿ ಆದರೂ ಬರಬಹುದು. ಈ ಕಾಯಿಲೆ ಬಂದಾಗ ವೈದ್ಯರ ಸಲಹೆ ಪಡೆದುಕೊಂಡು ಸೂಕ್ತ ಚಿಕಿತ್ಸೆ ಪಡೆಯಬೇಕು. ಕ್ಯಾನ್ಸರ್ ಕಾಯಿಲೆ ಪ್ರಾರಂಭದಲ್ಲಿ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಿದಲ್ಲಿ ಖಂಡಿತವಾಗಿ ಗುಣಪಡಿಸಬಹುದು. ಈ ಕಾಯಿಲೆ ಬರಲು ಪ್ರಮುಖ ಕಾರಣವೆಂದರೆ ಧೂಮಪಾನ, ಮದ್ಯಪಾನ, ಬಿಡಿ ಮತ್ತು ಸಿಗರೇಟ್ ಸೇವನೆಯಿಂದ ಕ್ಯಾನ್ಸರ್ ಕಾಯಿಲೆಗೆ ಒಳಗಾಗುತ್ತಾರೆ. ವಿಶೇಷವಾಗಿ ಮಹಿಳೆಯರಲ್ಲಿ ಸ್ಥನ ಮತ್ತು ಗರ್ಭಕೋಶದ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚು. ಹೆಣ್ಣು ಮಕ್ಕಳ ದೇಹದಲ್ಲಿ ಏನಾದರೂ ಏರುಪೇರು ಕಾಣಿಸಿಕೊಂಡರೆ ತಕ್ಷಣ ವೈದ್ಯರನ್ನು ಕಂಡು ತಪಾಸಣೆಗೆ ಒಳಗಾಗಬೇಕೆಂದು ವಿವರಿಸಿದರು.

## “ಆಶಾ ಕಾರ್ಯಕರ್ತೆಯರಿಗೆ ಜಾಗೃತಿ ಕಾರ್ಯಕ್ರಮ”



ಆಗಸ್ಟ್ 21 ರಂದು ಬಸವಕಲ್ಯಾಣ ತಾಲೂಕಿನ ಧನ್ನೂರು (ಕೆ) ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ, ಆಶಾ ಕಾರ್ಯಕರ್ತೆಯರಿಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ವಿಜಯಕುಮಾರ್ ಅವರು ಮಾನಸಿಕ ಕಾಯಿಲೆಯ ಕುರಿತು ಜಾಗೃತಿ ಮೂಡಿಸಿದರು. ಮಾನಸಿಕ ಕಾಯಿಲೆಯು ಒಂದು ಮೆದುಳಿನ ಕಾಯಿಲೆಯಾಗಿದೆ, ಮನುಷ್ಯನ ದೇಹದಲ್ಲಿ ಆಗುವ ರಾಸಾಯನಿಕ ಬದಲಾವಣೆಗಳಿಂದಾಗಿ ವರ್ತನೆಯಲ್ಲಿ ಭಿನ್ನತೆ ಕಂಡು ಬರುತ್ತದೆ. ಭಯ, ಆತಂಕ, ಖಿನ್ನತೆ, ಆತ್ಮಹತ್ಯೆಯ ಆಲೋಚನೆ ಮಾನಸಿಕ ಕಾಯಿಲೆಯ ಪ್ರಮುಖ ಲಕ್ಷಣಗಳು ಆಗಿವೆ ಎಂದು ತಿಳಿಸಿದರು. ಇಂಥ ಸಮಸ್ಯೆಗಳಿರುವ ವ್ಯಕ್ತಿಗಳನ್ನು ಪತ್ತೆ ಹಚ್ಚುವ ಮೂಲಕ ಅವರನ್ನು ಪ್ರಾಥಮಿಕವಾಗಿ ತಜ್ಞ ಮನೋವೈದ್ಯರೊಂದಿಗೆ ಸಮಾಲೋಚಿಸಿ ರೋಗವನ್ನು ಖಚಿತ ಪಡಿಸಲಾಗುವುದು, ತದನಂತರ ಸೂಕ್ತ ಚಿಕಿತ್ಸೆಯೊಂದಿಗೆ ಗುಣಪಡಿಸಿ ಸಮುದಾಯದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಲಾಗುವುದು. ಇಂಥಹ ಸಮಸ್ಯೆಗಳ ವ್ಯಕ್ತಿಗಳು ನಿಮ್ಮ ಅಕ್ಕಪಕ್ಕದ ಮನೆಯಲ್ಲಿ ಕಂಡು ಬಂದಲ್ಲಿ ಆರ್ಬಿಟ್ ಸಂಸ್ಥೆಯ ಸಹಾಯವಾಣಿ ಸಂಖ್ಯೆ 9036664271 ಕ್ಕೆ ಕರೆ ಮಾಡಿ ಮಾಹಿತಿ ನೀಡಬಹುದು. ಈ ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿಗಳು, ಶುಶ್ರೂಶಕಿಯರು, ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತರು ಸೇರಿ 31 ಜನ ಕಾರ್ಯಕ್ರಮದ ಸದೋಪಯೋಗ ಪಡೆದುಕೊಂಡರು.

## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ"



ಆಗಸ್ಟ್ 8 ರಂದು ಬೀದರ್ ತಾಲೂಕಿನ ಹಿಪ್ಪಳಗಾವ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಎಲ್.ಎಲ್.ಎಲ್.ಎಫ್ ಸಹಯೋಗದಲ್ಲಿ ಅಂಗನವಾಡಿ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಲಸಿಕಾಕರಣ ಕಾರ್ಯಕ್ರಮಕ್ಕೆ ಆಗಮಿಸಿದ ಪೋಷಕರಿಗೆ, ಕಾರ್ಯಕರ್ತರಾದ ಆನಂದ್ ಅವರು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು. ದೈಹಿಕವಾಗಿ ಮಾನಸಿಕವಾಗಿ ಶರೀರಿಕವಾಗಿ ಮತ್ತು ಸಾಮಾಜಿಕವಾಗಿ ಆರೋಗ್ಯವಾಗಿರುವುದೇ ಪರಿಪೂರ್ಣ ಆರೋಗ್ಯ. ಮನುಷ್ಯನ ಮೆದುಳಿನಲ್ಲಿ ಆಗುವ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ, ವರ್ತನೆಯಲ್ಲಿ ಬದಲಾವಣೆಯಾಗಿ ತನ್ನ ದಿನನಿತ್ಯದ ಕೆಲಸದಲ್ಲಿ ವ್ಯತ್ಯಾಸ ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎನ್ನುತ್ತೇವೆ.. ಈ ರೀತಿಯ ವರ್ತನೆಯನ್ನು ಮಾಟ ಮಂತ್ರದಿಂದ ಬರುವುದಿಲ್ಲ ಎಂದು ಪೋಷಕರಲ್ಲಿ ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ 12 ಜನ ಪೋಷಕರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## "ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಜಾಗೃತಿ"



ಆಗಸ್ಟ್ 7 ರಂದು ಬೀದರ್ ತಾಲೂಕಿನ ಮಾಳೆಗಾವ್ ಗ್ರಾಮದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಎಲ್,ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ ಕಾರ್ಯಕರ್ತರಾದ ಅರುಣ್ ರವರು ಸಾಮಾನ್ಯ ಆರೋಗ್ಯ, ದೈಹಿಕ ಆರೋಗ್ಯ, ಮತ್ತು ಮಾನಸಿಕ ಆರೋಗ್ಯದ ಕುರಿತು ಮತ್ತು ಕ್ಯಾನ್ಸರ್ ರೋಗದ ಕುರಿತು ಮಾಹಿತಿ ನೀಡಿದರು. ಮಾನಸಿಕ ಕಾಯಿಲೆಯೊಂದು ಮೆದುಳಿನ ಕಾಯಿಲೆಯಾಗಿದೆ, ಜನರು ಮೂಢನಂಬಿಕೆಗೆ ಬಲಿಯಾಗದೆ ತಜ್ಞ ಮನೋವೈದ್ಯರಿಂದ ಸೂಕ್ತ ಚಿಕಿತ್ಸೆ ಪಡೆಯುವ ಮುಖಾಂತರ ಮನೋ ಕಾಯಿಲೆಯಿಂದ ಹೊರ ಬರಬಹುದು ಎಂದು ಮಾಹಿತಿ ನೀಡಿದರು. ಜೊತೆಗೆ ಕ್ಯಾನ್ಸರ್ ರೋಗದ ಕುರಿತು ಜಾಗೃತಿ ಮೂಡಿಸುತ್ತ ಯುವಕರು ದುಶ್ಚಟಗಳಿಂದ ದೂರವಿರಬೇಕು, ದೇಹದಲ್ಲಿ ಗಡ್ಡೆ ರೂಪದ ಅಂಶಗಳು ಕಂಡು ಬಂದರೆ ಕೂಡಲೇ ವೈದ್ಯರಿಗೆ ಭೇಟಿಯಾಗಿ ಪರೀಕ್ಷೆಗೊಳಪಡಬೇಕು ಎಂದು ಮಾಹಿತಿ ನೀಡಿದರು. ಈ ಅರಿವಿನ ಕಾರ್ಯಕ್ರಮದಲ್ಲಿ 20 ಜನ ಶಾಲೆಯ ಮಕ್ಕಳು ಮತ್ತು ಮುಖ್ಯ ಗುರುಗಳಾದ ಶ್ರೀಮತಿ ರುಕ್ಸಾನ ಬೇಗಂ ಹಾಗೂ ಇನ್ನಿತರ ಶಿಕ್ಷಕರು ಉಪಸ್ಥಿತರಿದ್ದರು.

## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು"



ಆಗಸ್ಟ್ 12 ರಂದು ಬೀದರ್ ತಾಲೂಕಿನ ಅಯ್ಯಾಸ್ ಪುರ್ ಗ್ರಾಮದ ಮಹಿಳೆಯರಿಗೆ ಆರ್ಬಿಟ್ ಹಾಗೂ ನವಜೀವನ ಎಲ್.ಎಲ್.ಎಲ್.ಎಫ್ ಸಹಯೋಗದಲ್ಲಿ ಕಾರ್ಯಕರ್ತರಾದ ಶ್ರೀ ಆನಂದ್ ಅವರು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು. ಜನರು ಮೂಢನಂಬಿಕೆಗೆ ಬಲಿಯಾಗದೆ ತಜ್ಞ ಮನೋವೈದ್ಯರ ಮುಖಾಂತರ ಪರೀಕ್ಷೆಗೆ ಒಳಪಟ್ಟು ಸೂಕ್ತ ಚಿಕಿತ್ಸೆಯನ್ನು ಪಡೆಯುವಂತೆ ತಿಳಿಸಿದರು. ಮಾನಸಿಕ ಕಾಯಿಲೆ ಯಾರಿಗೆ ಬೇಕಾದರೂ ಬರಬಹುದು, ವ್ಯಕ್ತಿಯು ಅತಿಯಾಗಿ ಮಾನಸಿಕ ಒತ್ತಡಕ್ಕೆ ಒಳಗಾದ್ದಲ್ಲಿ, ಇದು ನಿರಂತರವಾಗಿ ಮುಂದುವರೆದು ಮಾನಸಿಕ ಕಾಯಿಲೆಯಾಗಿ ಪರಿಣಮಿಸುತ್ತದೆ. ವಿನಾ ಕಾರಣ ನಗುವುದು, ವಿನಾ ಕಾರಣ ಅಳುವುದು, ಕಿವಿಯಲ್ಲಿ ಏನೋ ವಿಚಿತ್ರ ಶಬ್ದ ಕೇಳಿಸಿದಂತಾಗುವುದು, ತನ್ನಲ್ಲಿತಾನೇ ಮಾತನಾಡುವುದು. ಇಂತಹ ಲಕ್ಷಣಗಳು ಕಂಡುಬರುತ್ತದೆ. ಇಂತಹ ಸಮಸ್ಯೆಯಿಂದ ಬಳಲುತ್ತಿರುವ ವ್ಯಕ್ತಿ ನಿಮ್ಮಲ್ಲಿ ಕಂಡು ಬಂದರೆ ತಾಲೂಕಿನ ಮಾನಸಿಕ ಆರೋಗ್ಯ ಶಿಬರಕ್ಕೆ ಕರೆದುಕೊಂಡು ಬಂದು ತಜ್ಞ ವೈದ್ಯರಿಂದ ಸೂಕ್ತ ಚಿಕಿತ್ಸೆಯನ್ನು ಕೊಡಿಸುವಂತೆ ಮಾಹಿತಿ ನೀಡಿದರು,. ಈ ಕಾರ್ಯಕ್ರಮದಲ್ಲಿ ಒಟ್ಟು 13 ಜನ ಭಾಗವಹಿಸುವುದರೊಂದಿಗೆ ಮಾನಸಿಕ ಅರಿವಿನ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

## “ಮಾನಸಿಕ ಅಸ್ವಸ್ಥರ ಕುರಿತು ಅರಿವು”



ಆಗಸ್ಟ್ 8 ರಂದು ಕಮಲನಗರ ತಾಲ್ಲೂಕಿನ ಕೋಟ್ಗಳ ಗ್ರಾಮದ ಗ್ರಾಮಸ್ಥರಿಗೆ, ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರಿ ಸಂಗೀತಾ ರವರಿಂದ ಮಾನಸಿಕ ಅಸ್ವಸ್ಥರ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗ ಯಾರಿಗೆ ಬೇಕಾದರೂ ಬರಬಹುದು, ಮಾನಸಿಕ ರೋಗದ ಲಕ್ಷಣಗಳಾದ ಏಕಾಂತವಾಗಿ ಇರುವದು, ವಿನ ಕಾರಣ ಅಳುವದು, ವಿನ ಕಾರಣ ನಗುವದು, ಸಂಶಯ ಪಡುವದು, ಕಿವಿಯಲ್ಲಿ ಶಬ್ದ ಕೇಳಿ ಬರುವದು, ತನ್ನಲ್ಲಿತಾನೇ ಇರುವದು ಇಂತಹ ಲಕ್ಷಣಗಳು ಕಂಡು ಬಂದಲ್ಲಿ ವ್ಯಕ್ತಿಯ ಮಾನಸಿಕ ರೋಗಕ್ಕೆ ತುತ್ತಾಗಿದ್ದಾನೆ ಎಂದು ತಿಳಿಸಲಾಯಿತು. ಈ ಅರಿವಿನ ಕಾರ್ಯಕ್ರಮದಲ್ಲಿ 11 ಜನರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## “ಮಾನಸಿಕ ಅಸ್ವಸ್ಥರ ಕುರಿತು ಅರಿವು”



ಆಗಸ್ಟ 5 ರಂದು ಕಮಲನಗರ ತಾಲೂಕಿನ ತೋರನಾ ವಾಡಿ ಗ್ರಾಮದ ಜನರಿಗೆ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಎಲ್.ಎಲ್.ಎಲ್.ಎಫ್ ಸಹಯೋಗದ್ದಲ್ಲಿ, ಸಂಸ್ಥೆಯ ಕಾರ್ಯಕರ್ತರಾದ ಕುಮಾರಿ ಸಂಗೀತಾ ರವರು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು. ಮೂಢ ನಂಬಿಕೆಗೆ ಬಲಿಯಾಗದೆ ಮಾನಸಿಕ ಕಾಯಿಲೆಗೆ ಮನೋವೈದ್ಯರ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಲು ಸಲಹೆ ನೀಡಿದರು. ಈ ರೋಗ ಯಾರಿಗೆ ಬೇಕಾದ್ರೂ ಬರಬಹುದು ಎಂದು ತಿಳಿ ಹೇಳಲಾಯಿತು. ರೋಗದ ಲಕ್ಷಣಗಳಾದ ಏಕಾಂತವಾಗಿ ಇರುವುದು, ವಿನ ಕಾರಣ ನಗುವದು, ವಿನ ಕಾರಣ ಅಳುವದು, ಕಿವಿಯಲ್ಲಿ ಒಂದು ರೀತಿಯ ಶಬ್ಧ ಬರುವದು, ತನ್ನಲ್ಲಿತಾನೇ ಮಾತಾಡುವದು ಇತ್ಯಾದಿ. ಇಂತಹ ವ್ಯಕ್ತಿ ನಿಮ್ಮ ಹಳ್ಳಿ ಯಲ್ಲಿ ಕಂಡುಬಂದಲ್ಲಿ. ತಾಲೂಕಾ ಆರೋಗ್ಯ ಕೇಂದ್ರದಲ್ಲಿ ತಜ್ಞ ಮನೋವೈದ್ಯದಿಂದ ಉಚಿತ ತಪಾಸಣೆ ಮತ್ತು ಚಿಕಿತ್ಸೆ ಪಡೆದುಕೊಳ್ಳಬಹುದು ಎಂದು ತಿಳಿ ಹೇಳಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 12 ಜನರು ಉಪಸ್ಥಿತರಿದ್ದರು.

## “ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು”



ಆಗಸ್ಟ್ 14 ರಂದು ಭಾಲ್ಕಿ ತಾಲೂಕಿನ ಕಲವಾಡಿ ಗ್ರಾಮದ ಮಹಾತ್ಮ ಗಾಂಧೀಜಿ ಸರಕಾರಿ ಪ್ರೌಢಶಾಲೆ ಮಕ್ಕಳಿಗೆ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗ, ಮಾನಸಿಕ ರೋಗಕ್ಕೆ ಕಾರಣ, ಮಾನಸಿಕ ಕಾಯಿಲೆಯ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಜೊತೆಗೆ ಕ್ಯಾನ್ಸರ್ ಕಾಯಿಲೆಯು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ನಿಧಾನವನ್ನು ತಿಳಿಸಲಾಯಿತು. ಪ್ರತಿ ತಿಂಗಳು ಎರಡನೆ ಮಂಗಳವಾರ ಭಾಲ್ಕಿಯಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ ಇರುತ್ತದೆ ಎಂದು ಹೇಳಲಾಯಿತು. ಈ ಜಾಗೃತಿ ಕಾರ್ಯದಲ್ಲಿ 40 ಜನ ಶಾಲೆಯ ಮಕ್ಕಳು ಹಾಗೂ ಉಪಸ್ಥಿತರಿದ್ದರು.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಉಜ್ಜೀವನ ಕಾರ್ಯಕ್ರಮ"

## "ಗ್ರಾಮೀಣ ವಲಯದಲ್ಲಿ ಶಾಲಾ ಮಕ್ಕಳಿಗೆ ಶೈಕ್ಷಣಿಕ ಆದರ್ಶ"



ಆಗಸ್ಟ್ 8 ರಂದು ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮದ ಯೋಜನೆಯ ಅಡಿಯಲ್ಲಿ ಸಂಯೋಜಕರು ಮತ್ತು ಕಾರ್ಯಕರ್ತರು ಕಲಬುರಗಿ ಜಿಲ್ಲೆಯ ಉದನೂರ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಮುಖ್ಯಗುರುಗಳನ್ನು ಭೇಟಿಮಾಡಿ ಶಾಲಾ ಮಕ್ಕಳ ಸಮಸ್ಯೆಗಳ ಬಗ್ಗೆ ಶಾಲೆಯ ಮುಖ್ಯ ಗುರುಗಳೊಂದಿಗೆ ಚರ್ಚಿಸಿ, ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟ ಮಾಡಲು ತಟ್ಟೆ ಮತ್ತು ಗ್ಲಾಸ ಹಾಗೂ ಜಮಖಾನಿ ಇಲ್ಲದಿರುವ ಕಾರಣ ಮುಖ್ಯ ಗುರುಗಳಿಂದ ಕರಪತ್ರ ಬರೆಸಿಕೊಂಡು ನಂದಿಕೂರಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೂಂದಿಗೆ ಹಾಗೂ ಗ್ರಾಮ ಪಂಚಾಯತ ಸದಸ್ಯರೋಂದಿಗೆ ಚರ್ಚಿಸಿ ಅರ್ಜಿಯನ್ನು ಸಲ್ಲಿಸಿ, ದಿನಾಂಕ 15/8/24 ರಂದು ಸ್ವಾತಂತ್ರ ದಿನಾಚಾರಣೆಯ ಆಚಾರಣೆ ಮಾಡುವ ಮೂಲಕ ಮಕ್ಕಳಿಗೆ ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್. ದೀಪಕ್ ಶಾಲೆಯ ಮುಖ್ಯ ಗುರುಗಳು. 210 ಗ್ಲಾಸ್ 210 ತಟ್ಟೆ ಒಂದು ಜಮಖಾನಿಯನ್ನು ವಿತರಿಸಲಾಯಿತು. ಶಾಲೆಯ ಮುಖ್ಯಗುರುಗಳೂ ಸ್ವತಂತ್ರ್ಯ ದಿನಾಚಾರಣೆಯನ್ನು ಉದ್ದೇಶಿಸಿ ಮಾತಾನಾಡಿದರು ಈ ಕಾರ್ಯಕ್ರಮದಲ್ಲಿ ಶಾಲೆಯ ಸಿಬ್ಬಂದಿ ವರ್ಗದವರು. ಗ್ರಾಮ ಪಂಚಾಯತ ಸದಸ್ಯರು. ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್. ದೀಪಕ್. ಮತ್ತು ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಚಂದ್ರಕಾಂತ್ & ಕಾರ್ಯಕರ್ತೆಯಾದ ಶ್ರೀ ಮತಿ ನಂದಿನಿರವರು ಹಾಗೂ ಗ್ರಾಮದ ಮುಖಂಡರು ಮತ್ತು ಸದಸ್ಯರ ಉಪಸ್ಥಿತರಿದ್ದರು.



## "ಸಾವಯವ ಕೃಷಿಯ ಬಗ್ಗೆ ಕಾರ್ಯಕ್ರಮ"



ಆಗಸ್ಟ್ 26 ರಂದು ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮದ ಯೋಜನೆಯ ಅಡಿಯಲಿ ಕಲಬುರಗಿ ತಾಲೂಕಿನಲ್ಲಿ ಬರುವ ನಾಗನಹಳ್ಳಿ ಗ್ರಾಮಕ್ಕೆ ಬೇಟಿಮಾಡಿ ರೈತರಿಗೆ ಹನುಮಾನ ಮಂದಿರದಲ್ಲಿ ಸಾವಯವ ಕೃಷಿಯ ಬಗ್ಗೆ ಕಾರ್ಯಕ್ರಮವನ್ನು ಆಯೋಜಿಸಿ ಮತ್ತು ತೋಗರಿ ಬೆಳೆ ಬಿತ್ತನೆ ಮಾಡಿದ ರೈತರಿಗೆ ಕಾರ್ಯಕರ್ತೆಯಾದ ಶ್ರೀ ಮತಿ ನಂದಿನಿ ರವರು ಮಾಹಿತಿ ನೀಡಿ, ತೋಗರಿ ಬೆಳೆದ ರೈತರು ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಸಿಗದೆ ಇರುವ ಕಾರಣ ಸರಕಾರಿ ಕೃಷಿ ಇಲಾಖೆಯಲ್ಲಿ ತಮ್ಮ ದಾಖಲೆಗಳನ್ನು ನೀಡುವ ಮೂಲಕ ನೋಂದಣಿ ಮಾಡಿಕೊಂಡು ತೋಗರಿ ಬೆಳೆಗೆ ಸರಿಯಾದ ಆದಾಯವನ್ನು ಪಡೆದುಕೋಳ್ಳಬೆಕೇಂದು ರೈತರಿಗೆ ತಿಳಿಸಲಾಯಿತ್ತು,

## "ಸಿರಿ_ ಧಾನ್ಯಗಳನ್ನು ಸೇವಿಸಿ ಅರೋಗ್ಯ ವೃದ್ದಿಸಿ"




ಆಗಸ್ಟ್ 6 ರಂದು ಕಲಬುರಗಿ ತಾಲೂಕಿನ ಪಾಣೆಗಾವ ಗ್ರಾಮದಲ್ಲಿ, ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಯೋಜನೆಯ ಅಡಿಯಲ್ಲಿ ಕುಮಾರ ನವೀನ ರವರು ರೈತ ಬಾಂದವರನು ಉದ್ದೇಶಿಸಿ 6 ಜನರೈತರ ಹೋಲ ಭೇಟಿ ಮಾಡಿ, 30 ಎಕರೆ ಸಮೀಕ್ಷೆ ಮಾಡಿ ಅತಿಯಾದ ಮಳೆಯಿಂದಾಗಿ ತೋಗರಿ ಬೆಳೆಯಲ್ಲಿ ಹಾನಿ ಉಂಟಾಗಿರುವ, ನಟ್ಟೆರೋಗದ ನೀರ್ವಹಣೆಗೆ ಪ್ರತಿ ಎಕರೆಗೆ 2 ಕೆಜಿ, ಟ್ರೈಕೂಡರ್ಮವನ್ನು 100 ಕೆ.ಜಿ ತಿಪ್ಪೆಗೋಬರದ ಜೋತೆಗೆ ಸೇರಿಸಿ ಬೆಳೆಯ ಬುಡಕ್ಕೆ ಉಪಚರಿಸಿ ಹಾಗೂ ಪೈಟೋಪ್ತರ ಮಚ್ಚೆ ರೋಗದ ತೀವ್ರತೆ ಹೆಚ್ಚಾಗಿರುವ ಹೋಲಗಳಲ್ಲಿ 3 ಗ್ರಾಂ. ಮೆಟಲ್ಯಾಕ್ಸಿಲ್ ಶಿಲೀಂದ್ರ ನಾಶಕವನ್ನು ಪ್ರತಿ ಲೀಟರ್ ನೀರಿಗೆ ಬೇರೆಸಿ ಬೆಳೆಗೆ ಸಿಂಪಡಣೆ ಮಾಡುವುದರಿಂದ ರೋಗ ಹರಡುವುದನ್ನು ತಡೆಯಬಹುವುದು, ಹಾಗೂ ಹಿಂಗಾರು ಬೆಳೆಗಳಾದ ಜೋಳ, ಸಜ್ಜೆ, ಗೋಧಿ, ನವಣೆ, ಬರಗು, ಬಗ್ಗೆ ಮಾಹಿತಿ ನೀಡುವ ಮೂಲಕ ಸಾವಯವ ಗೋಬ್ಬರ ಮತ್ತು ಔಷದಿಗಳಾದ ಜೀವಾಮೃತ, ಬ್ರಮಾಸ್ರ, ನೀಮಾಸ್ತ್ರ, ಇವುಗಳನ್ನು ಬಳಸುವುದರಿಂದ ಭೂಮಿಯ ಫಲವತ್ತತೆ ಮತ್ತು ಬೆಳೆಗಳ ಫಸಲು ಹೆಚ್ಚಾಗುವುದು ಇದರಿಂದ ಮಾರುಕಟ್ಟೆಯಲ್ಲಿ ಮತ್ತು ಖಾಸಗಿವಲಯಗಳಲ್ಲಿ ಹೆಚ್ಚಿನ ಲಾಭಾಂಶವನ್ನು ಪಡೆಯಬಹುದು ಎಂಬದಾಗಿ ಮಾಹಿತಿ ನೀಡಲಾಯಿತು.



## “ಸ್ವ-ಉದ್ಯೋಗದ ಬಗ್ಗೆ ಮಾಹಿತಿ”





ಆಗಸ್ಟ್ 14 ರಂದು ಕಲಬುರಗಿ ಜಿಲ್ಲೆಯ ನಂದಿಕೂರ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಇಂದುರವರು ಸಮುದಾಯದ ರೈತರಿಗೆ ಪಶು ಇಲಾಕೆಯಲ್ಲಿ ಕುರಿ ಮತ್ತು ಕೋಳಿ ಸಾಕಾಣಿಕೆಯ ತರಬೇತಿಯನ್ನು ಪಡೆದುಕೊಂಡು ನಿಮ್ಮ ಕೆಲಸದೊಂದಿಗೆ ಕುರಿ ಸಾಕಾಣಿಕೆ ಮಾಡಬೇಕು ಹಾಗೂ ಗ್ರಾಮ ಪಂಚಾಯಿತಿ ಅಡಿಯಲ್ಲಿ ಅರ್ಜಿ ಸಲಿಸಿರಿ ಎಂದು ಹೇಳಿದರು. ಮತ್ತು ಕುರಿಗಳ ಸಂಖ್ಯೆ ಹೆಚ್ಚಾದಂತೆ ಅವುಗಳನ್ನು ಮಾರಾಟ ಮಾಡಿ ಹೆಚ್ಚಿನ ಆದಾಯವನ್ನು ಪಡೆದುಕೋಳ್ಳಿರಿ ಎಂದು ತಿಳಿಸಲಾಯಿತ್ತು. ಈ ಮಾಹಿತಿಯನ್ನು ಪಡೆದುಕೊಂಡ ಫಲಾನುಭವಿ ಶಿವು ರವರು 4 ಕುರಿಗಳನ್ನು ಖರಿದಿ ಮಾಡಿ ಕುರಿ ಸಾಕಾಣಿಕೆ ಮಾಡುತಿದಾರೆ.

## “ಗ್ರಾಮೀಣ ವಲಯದಲ್ಲಿ ಕೌಟುಂಬಿಕ ಜೀವನೋಪಾಯಕ್ಕೆ ಗ್ರಾಮ ಪಂಚಯಿತಿ ಅಡಿಯಲ್ಲಿ ನರೇಗಾ ಯೋಜನೆ ಆಸರೆ”

2024 ರಲ್ಲಿ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಯೋಜನೆಯ ಅಡಿಯಲ್ಲಿ ಕಲಬುರಗಿ ತಾಲೂಕಿನ ಉದನೂರ ಗ್ರಾಮಕ್ಕೆ ಸಂಯೋಜಕರು ಮತ್ತು ಕಾರ್ಯಕರ್ತರು ಹೋಗಿ ಶ್ರೀ ವರಮಾಹಲಕ್ಷ್ಮೀ ಸಂಘದ 20 ಜನರಿಗೆ ಮತ್ತು 30 ಜನ ರೈತರಿಗೆ ಮಾಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಮಾಹಿತಿಯನ್ನು ನೀಡಿದರು. ಉದ್ಯೋಗ ಖಾತರಿ ಯೋಜನೆಯ ಕಾರ್ಡ್ ಇರುವತಂಹ 50 ಜನರ ದಾಖಲೆಗಳನ್ನು ತೆಗೆದುಕೋಡು, ನಂದಿಕೂರ ಗ್ರಾಮ ಪಂಚಾಯಿತಿಗೆ ಭೇಟಿಮಾಡಿ ಅರ್ಜಿಗಳನ್ನು ಸಲಿಸಲಾಯಿತ್ತು. ಈ ಕಾರ್ಡ್‌ಗಳನ್ನು ಎರಡು ವರ್ಷಗಳ ನಂತರ ಪಡೆದುಕೋಳಲಾಯಿತು. ದಿನಾಂಕ 27/8/24 ರಂದು ಹನುಮಾನ್ ಮಂದಿರದಲ್ಲಿ ಸಮುದಾಯ ಸಂಘಗಳನ್ನು ಮರು ಬಲಪಡಿಸುವುದರ ಮೂಲಕ ಕಾರ್ಯಕ್ರಮವನ್ನು ಆಯೋಜಿಸಿ ಈ ಕಾರ್ಯಕ್ರಮದಲ್ಲಿ 17 ಜನರಿಗೆ ಉದ್ಯೋಗ ಖಾತರಿ ಕಾರ್ಡಗಳನ್ನು ಶ್ರೀ ಚಂದ್ರಕಾಂತ ಮತ್ತು ಶ್ರೀ ಮತಿ ನಂದಿನಿ ರವರು ವಿತರಿಸಿದರು.





## “ಗ್ರಾಮೀಣ ವಲಯದಲ್ಲಿರೈತರಉತ್ತಮ ಬೆಳವಣಿಗೆಗೆ.......!! ಕೃಷಿ ಇಲಾಖೆಯು ಪ್ರಮುಖ್ಯತೆಯ ಮಹತ್ವ”.......!!



ಆಗಸ್ಟ್ 14 ರಂದು ಕಲಬುರಗಿ ತಾಲೂಕಿನ ಫರಹತಬಾದ್‌ಗ್ರಾಮಕ್ಕೆ ತೆರಳಿ ಸರಕಾರಿ ರೈತ ಸಂಪರ್ಕ ಕೇಂದ್ರ ಮತ್ತು ಸೇವಾ ಸಂಗಮ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಡಾ. ಗುರುರಾಜ ಕುಲಕರಣಿ ಮತ್ತು ಸುಜಾತ {ಕೃಷಿ ತರಬೇತಿಗಾರರು} ಹಾಗೂ ಕೃಷಿ ಅಧಿಕಾರಿಗಳಾದ ಶೀಮತಿ ಶೃತಿ ಮತ್ತು ಶೀ ಮತಿ ಪ್ರೀಯಂಕಾ ಹಾಗೂ ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಚಂದ್ರಕಾಂತ ರವರು ಮತ್ತು ಕಾರ್ಯಕರ್ತನಾದ ಕುಮಾರ ನವೀನ ರವರು ಹೋಬಳ್ಳಿ ಮಟ್ಟದಲ್ಲಿ ರೈತರಿಗೆ ಮತ್ತು ಮಹಿಳೆಯರಿಗೆ “ಬೀಜೋಪಚಾರ ಮತ್ತು ಸುರಕ್ಷಿತ ಕಿಟ ನಾಶಕ ಬಳಕೆ ಆದೋಲನ” ಈ ಕಾರ್ಯಕ್ರಮವನ್ನು ಮಾಡುವ ಮೂಲಕ ಗ್ರಾಮೀಣ ವಲಯಗಳಲ್ಲಿ ರೈತ ಬಾಂದವರನ್ನು ಕುರಿತು ಡಾ. ಗುರುರಾಜ ಕುಲಕರಣಿ ಇವರು ಬೀಜ ಸಂಸ್ಕಾರಣೆ ಮತು ಬೀಜೋಪಚಾರ ಇವುಗಳ ತರಬೇತಿಯನ್ನು ಕೃಷಿ ಇಲಾಖೆಯಲ್ಲಿ ಪಡೆದುಕೊಳುವುದು, ಆದ್ದರಿಂದ ರೈತರು ಬೀತ್ತನೆ ಮಾಡುವ ಬೀಜಗಳನ್ನು ಯಾವರಿತಿಯಲ್ಲಿ ಶೇಖರಣೆ ಮಾಡಿಕೋಳಬೇಕು. ಹಾಗೂ ಹೇಗೆ ಬೀತ್ತನೆ ಮಾಡುವುದು, (ನಿಶ್ಚಿತ ಸಾಲು ಬೇಸಾಯ ಪದ್ದತಿ, ಚೌಕ ಮಡಿಗಳು, ಬೋದು ಸಾಲುಗಳು, ಸಮಪಾತಳಿ ಬದುಗಳು, ಮುಂತಾದವುಗಳ ಬಗ್ಗೆ ಮಾಹಿತಿ ನೀಡಿದರು. ಹಾಗೂ ಕೃಷಿ ಅಧಿಕಾರಿಗಳಾದ ಶ್ರೀಮತಿ ಶೃತಿ ಇವರು ರೈತರನ್ನು ಕುರಿತ್ತು ನಿಮ್ಮ ಹೋಲಗಳಲ್ಲಿ ಬೆಳೆಗಳನ್ನು ಕಾಪಾಡಿಕೊಳ್ಳಲು ಅತಿ ಹೆಚ್ಚಾಗಿ ಆ ಬೆಳೆಗಳ ರೋಗಗಳನ್ನು ಗುರುತಿಸಿ ಅದಕ್ಕೆ ರಾಸಯನಿಕ ಔಷಧಿಗಳನ್ನು ಬಳಸುತ್ತಾರೆ. ಆದರೆ ಆ ಔಷಧಿಗಳನ್ನು ಬಳಸುವ ಮುಂಚೆ ರೈತರು ತಮ್ಮ ಸುರಕ್ಷಿತಾ ಜೀವ ಕಾಪಾಡಿಕೊಳ್ಳಲು ಮೂಖಕ್ಕೆ ಮಸ್ಕ್, ಕೈಗಳಿಗೆ ಗ್ಲೌಸ್, ತಲೆಗೆ ಕ್ಯಾಪ್, ಮತ್ತು ದೆಹಕ್ಕೆ ಸಂರಕ್ಷಣೆ ಮಾಡಿಕೊಳಲು ಬಟ್ಟೆಯನ್ನು ಬಳಸಬೇಕು ಎಂದು ತಿಳಿಸಿದರು. ಹಾಗೂ ಅತೀ ಹೆಚ್ಚಾಗಿ ಮಿಶ್ರ ಬೆಳೆಗಳು ಹಾಗೂ ಸಾವಯವ ಕೃಷಿ ಮತ್ತು ಜೀವಾಮೃತ, ಬ್ರಹ್ಮಸ್ತ್ರ, ಗೋಮಯ, ಇವುಗಳನ್ನು ಬಳಸುವುದರಿಂದ ಭೂಮಿಯ ಫಲವತ್ತತೆ ಮತ್ತು ಬೆಳೆಯ ಫಸಲು, ಹೆಚ್ಚಿನ ರಿತಿಯಲ್ಲಿ ಬರುವುದರಿಂದ ಆದಾಯವನ್ನು ಪಡೆಯಬಹುದು. ಈ ಕಾರ್ಯಕ್ರಮದಲ್ಲಿ 40 ಜನರೈತರು ಮತ್ತು ಮಹಿಳೆಯರು ಭಾಗವಹಿಸಿ ಈ ಮಾಹಿತಿಯ ಪ್ರೇರಣೆಯನ್ನು ಪಡೆದುಕೊಂಡರು.



## “ಗ್ರಾಮೀಣ ವಲಯದ ಜನರಿಗೆ ಮನೆಯಂಗಳದಲ್ಲಿ ಸಾವಯವ ಕೈತೋಟದ ಬೆಳವಣಿಗೆಗೆ ಮಹತ್ವ”



ಆಗಸ್ಟ್ 3 ರಂದು ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮ ಯೋಜನೆಯ ಅಡಿಯಲ್ಲಿ ಸಂಯೋಜಕರಾದ ಶ್ರೀ ಚಂದ್ರಕಾಂತ ಮತ್ತು ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ರವರು ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ಮಾಡಿ ಅಲ್ಲಿ ಇರುವಂತಹ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಕೆ.ವಿ.ಕೆ. ಸಹಾಯದೊಂದಿಗೆ ಉದನೂರಗ್ರಾಮೀಣ ವಲಯಕ್ಕೆ ಭೇಟಿಮಾಡಿ ನಮ್ಮ ಫಲಾನ್ನುಭವಿಗಳಾದ 18 ಜನ ರೈತರಿಗೆ ಮನೆಯ ಅಂಗಳದಲ್ಲಿ ಸಾವಯವ ಕೈ ತೋಟವನ್ನು ಮಾಡಲು 14 ತರಹದ ತರಕಾರಿ ಬೀಜಗಳನ್ನು ಮತ್ತು 8 ತರಹದ ತರಕಾರಿ ಅಗಿಗಳನ್ನು ಪ್ರತಿ ಒಬ್ಬರಿಗೆ 50 ಅಗಿಗಳನ್ನು ಕೃಷಿ ಅಧಿಕಾರಿಯಾದ ಡಾ. ಸನ್ಮತಿ ಎ.ಡಿ.ಎ ರವರು ಮತ್ತು ಜಯೀರ ಸರ್, ರವರು ವಿತ್ತರಿಸಿದರು,

# “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

## “ಚೇತನ ಕೇಂದ್ರದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳಿಗೆ ಫಿಜಿಯೋಥೇರಪಿ”



ಆಗಸ್ಟ್ 8 ರಂದು ಸೇವ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಫೌಂಡೇಶನ್ ಅವರ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದಡಿಯಲ್ಲಿ ಕಲಬುರಗಿ ನಗರ ಪ್ರದೇಶದ ಚೇತನ ಕೇಂದ್ರದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳಿಗೆ ಫಿಜಿಯೋಥೇರಪಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರಯೋಗಿಕವಾಗಿ ಫಿಜಿಯೋಥೇರಪಿಯನ್ನು ನೀಡಲು ಬೆಂಗಳೂರಿನ ಗುಡ್ ಸಾಮ್ ಸಂಸ್ಥೆ ವತಿಯಿಂದ ಫಿಜೋಥೆರಪಿಸ್ಟ್ ಡಾಕ್ಟರ್ ಶ್ರೀಮತಿ ದೀಪಾನ್ವಿತ ಅವರು 16 ಮಕ್ಕಳಿಗೆ ಪ್ರಯೋಗಿಕವಾಗಿ ಥೇರಪಿಯನ್ನು ನೀಡಿದರು. ಇದರ ಪ್ರಯೋಜನವನ್ನು ಮಕ್ಕಳು ಮತ್ತು ಪಾಲಕರು ಯಾವರೀತಿ ಮನೆಯಲ್ಲಿ ಮಾಡಬೇಕೆನ್ನುವುದು ಅರಿತುಕೊಂಡರು. ಈ ಕಾರ್ಯಕ್ರಮದಲ್ಲಿ ಗುಡ್ ಸಾಮ್ ಸಂಸ್ಥೆಯ ನಿರ್ದೇಶಕರಾದ ಶ್ರೀಯುತ ಡೇವಿಡ್, ಮದರ್‌ತೆರೇಸಾ ಆಸ್ಪತ್ರೆಯ ನಿರ್ದೇಶಕರಾದ ಫಾದರ್ ವಿನ್‌ಸೆಂಟ್, ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್, ಸಹ ನಿರ್ದೇಶಕರಾದ ಫಾದರ್ ದಿಪಕ್ , ಕಾರ್ಯಕ್ರಮದ ವ್ಯವಸ್ಥಾಪಕಿ ಶ್ರೀಮತಿ ಶ್ವೇತಾ ಮತ್ತು ಮದರ್‌ತೆರೇಸಾ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಮತ್ತು ಸಂಸ್ಥೆಯ ಸಿಬ್ಬಂದಿ ವರ್ಗದವರು ಮಕ್ಕಳು ಮತ್ತು ಪಾಲಕರು ಭಾಗವಹಿಸಿದರು.



## “ಶೀಘ್ರ ಪತ್ತೇ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ”



ಕಲಬುರ್ಗಿ ನಗರ ಪ್ರದೇಶದ ಅಬುಬಕರ್ ಅಂಗನವಾಡಿ ಕೇಂದ್ರದಲ್ಲಿ ಆಗಸ್ಟ್ 13 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜೀ ಫೌಂಡೇಶನ್ ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೇ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೋಳ್ಳಲಾಯಿತ್ತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಕುರಿತು ಮಾಹಿತಿಯನ್ನು ನೀಡಲಾಯಿತ್ತು. 0-6 ಬೇಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳು ಅಂದರೇ ಹೇಗೆ ಇರುತ್ತಾರೆ 4 ವರ್ಷದ ಮಗು ಸರಳವಾಗಿ ಮಾತ್ತನಾಡದೆ ಇರುವುದ್ದು. 1 ವರ್ಷದ ಮಗುವಿದ್ದರು ಕತ್ತು ಕುಳಿತುಕೋಳದೆ ಇರುವುದು, ಮಗು ನಡೆದ್ದಾಡದೆ ಇರುವುದ್ದು, ಈ ರೀತಿಯಾಗಿ ಅನೇಕ ರೀತಿಯ ಸಮ್ಮಸ್ಯೆ ಹೊಂದಿರುವಂತಹ ಮಕ್ಕಳಿಗೆ ಸೇವಾಸಂಗಮ ಸಂಸ್ಥೆ ಈ ಎಲ್ಲಾ ಮಕ್ಕಳಿಗೆ ಏನೇಲ್ಲಾ ಸೌಲಭ್ಯಗಳು ದೋರೆಯುತ್ತದೆ ಹಾಗೂ ಆ ಮಕ್ಕಳಿಗೆ ಏನೇಲ್ಲಾ ಚಟುವಟಿಕೆ ನೀಡುತ್ತೆವೆ ಹಾಗೂ ಸರ್ಕಾರಿ ಸೌಲಭ್ಯಗಳು ದೋರೆಯುವಲ್ಲಿ ಸೇವಾ ಸಂಗಮ ಸಂಸ್ಥೆಯು ಸಹಕಾರ ನೀಡುವುದರಲ್ಲಿ ಪ್ರಮುಖ ಸೇವೆಯನ್ನು ನೀಡುತ್ತಿದೆ ಎಂಬುದ್ದರ ಕುರಿತು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಜನರಿಗೆ ಮಾಹಿತಿ ನೀಡಲಾಯಿತ್ತು. ಒಟ್ಟು 14 ಜನ ಪಾಲ್ಗೊಂಡಿದ್ದರು.



## "ಶ್ರೀ ಶರಣಬಸವೇಶ್ವರ ದೇವಸ್ಥಾನದಲ್ಲಿ ಟೆಂಟ್ ಹೌಸ್ ಜಾಗೃತಿ ಕಾರ್ಯಕ್ರಮ"



ಆಗಸ್ಟ್ 19 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಶ್ರೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಅಡಿಯಲ್ಲಿ ಬರುವ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಕುರಿತು ಕಲಬುರಗಿ ನಗರ ಪ್ರದೇಶದಲ್ಲಿ ಬರುವ ಶ್ರೀ ಶರಣಬಸವೇಶ್ವರ ದೇವಸ್ಥಾನದಲ್ಲಿ ಟೆಂಟ್ ಹೌಸ್ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಒಂದುಕಾರ್ಯಕ್ರಮದಲ್ಲಿ ಶ್ರೀ.ರಾಜಕುಮಾರ ಮತ್ತು ಕು. ಅನಿತಾ ಕರಪತ್ರಗಳನ್ನು ಹಂಚುವುದರ ಮೂಲಕ ಬೆಳವಣಿಗೆಯಲ್ಲಿ ಕುಂಠಿತವಿರುವ 0–6 ವಯಸ್ಸಿನ ಮಕ್ಕಳ ನ್ಯೂನ್ಯತೆಯನ್ನು ಯಾವರೀತಿ ಗುರುತಿಸಬಹುದು, ಇದರಲ್ಲಿ ನಮ್ಮ ಸಂಸ್ಥೆ ಕಾರ್ಯವೈಖರಿಯ ಕುರಿತು ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ 200 ಜನರಿಗೆ ಮಾಹಿತಿ ನೀಡಲಾಯಿತು.

## "ಬೆಳವಣಿಗೆಯಲ್ಲಿ ಕುಂಠಿತಗೊಂಡಿರುವ ಮಕ್ಕಳ ಉತ್ತೇಜಕ ಚಟುವಟಿಕೆ"



26 ಅಗಸ್ಟ್ ರಂದು ಸಾವಳಗಿ ಗ್ರಾಮದ ಮೂರಾರ್ಜಿ ಪ್ರೌಡ ಶಾಲೆ ಸಾವಳಗಿಯಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಪೌಂಡೇಶನ ಸಂಯುಕ್ತಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಕಲಬುರಗಿ ತಾಲೂಕಿನ ಸಾವಳಗಿ ಗ್ರಾಮದ ಮುರಾರ್ಜಿ ದೇಸಾಯಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಬೆಳವಣಿಗೆಯಲ್ಲಿ ಕುಂಠಿತಗೊಂಡಿರುವ 0–6 ವರ್ಷದ ಒಳಗಿನ ಮಕ್ಕಳನ್ನು ಹಂತ ಹಂತವಾಗಿ ಗುರುತಿಸುವದರ ಮೂಲಕ ಉತ್ತೇಜಕ ಚಟುವಟಿಕೆಯನ್ನು ನೀಡಿ, ಮಗುವಿನಲ್ಲಿ ಬದಲಾವಣೆಯನ್ನು ತರುವುದು ಸಂಸ್ಥೆ ಯೋಜನೆ ಮುಖ್ಯ ಉದ್ದೇಶವಾಗಿದೆ. ಇಂದು ಕಾರ್ಯಕರ್ತರಾದ ಲಕ್ಷ್ಮೀ ಅವರು ಮಕ್ಕಳಿಗೆ ಅರಿವನ್ನುಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 70 ವಿದ್ಯಾರ್ಥಿಗಳಿದ್ದು, ಶಿಕ್ಷಕಿಯಾದ ಅಂಜುಮ್ ಸುಜಾತ, ಆಶಾ ಕಾರ್ಯಕರ್ತೆಯಾದ ಇಂದುಮತಿ ಉಪಸ್ಥಿತರಿದರು.

## "ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳನ್ನು ಗುರುತ್ತಿಸುವ ವಿಧಾನಗಳ ಕುರಿತು ಜಾಗೃತಿ"



ಕಲಬುರಗಿ ತಾಲ್ಲೂಕಿನ ಫರಹತಬಾದ ಗ್ರಾಮದ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಿನಾಂಕ: 21.08.2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳನ್ನು ಗುರುತ್ತಿಸುವ ವಿಧಾನಗಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ಅವರು ಮಾತನಾಡಿ 0–6 ವರ್ಷದ ಒಳಗಿನ ಮಕ್ಕಳಲ್ಲಿ ಬೆಳವಣಿಗೆಯ ಹಂತಗಳು ಕುಂಠಿತವಾಗುವುದು ಸಾಮಾನ್ಯ ಆದರೆ ಅದನ್ನು ಹಾಗೆ ಬಿಟ್ಟರೆ ಮಗುವಿನ ದೈಹಿಕ, ಮಾನಸಿಕ, ಭೌತಿಕ, ಭಾಷಾ ಹಾಗೂ ಸಾಮಾಜಿಕ ಬೆಳವಣಿಗೆ ತೊಂದರೆ ಉಂಟು ಮಾಡುತ್ತದೆ ಆದ್ದರಿಂದ ಶೀಘ್ರವಾಗಿ ಪತ್ತೆ ಹಚ್ಚುವ ಮೂಲಕ ಪ್ರಾರಂಭಿಕ ಶಿಕ್ಷಣವನ್ನು ಪ್ರಾರಂಭಿಸಬೇಕು. ಇಂತಹ ಮಕ್ಕಳನ್ನು ಪತ್ತೆ ಹಚ್ಚುವಲ್ಲಿ ವಿಫಲವಾದಲ್ಲಿ ಆ ಮಕ್ಕಳು ಭವಿಷ್ಯದಲ್ಲಿ ಅಂಗವಿಕಲತೆಗೆ ಒಳಗಾಗುತ್ತಾರೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ 20 ಜನ ಆಶಾ ಕಾರ್ಯಕರ್ತೆಯರು ಹಾಗೂ ಪ್ರಾಥಮಿಕ ಆರೋಗ್ಯಕೇಂದ್ರದ ಸಿಬ್ಬಂದಿ ವರ್ಗದವರು ಭಾಗವಹಿಸಿದರು.

## "ಬಾಲ್ಯ ವಿವಾಹದ್ದ ಬಗ್ಗೆ ಮಾಹಿತಿ ಕಾರ್ಯಕ್ರಮ"



ಕಲಬುರಗಿ ನಗರ ಪ್ರದೇಶದಲ್ಲಿ ಬರುವಂತಹ ಸಾಬೀರ್ ಮಜೀದ್ ಅಂಗನವಾಡಿ ಕೇಂದ್ರದಲ್ಲಿ ಅಗಸ್ಟ್ 20 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಬಾಲ್ಯ ವಿವಾಹದ ಬಗ್ಗೆ ಮಾಹಿತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಸರ್ಕಾರದ ಪ್ರಕಾರ 18 ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲಿ ಮದುವೆಯಾದರೆ ಇದನ್ನು ಬಾಲ್ಯ ವಿವಾಹ ಎಂದು ಕರೆಯುತ್ತೆವೆ. ಹುಡಗನಿಗೆ 21 ವರ್ಷ ಸಾಮಾನ್ಯವಾಗಿ ಹುಡಗಿಗೆ 18 ವರ್ಷ ಹೆಣ್ಣು ಮಕ್ಕಳು ಮಾನಸಿಕ ದೌರ್ಬಲ್ಯಕ್ಕೆ ಒಳಗಾಗುತ್ತಾರೆ. ಬಾಲ್ಯವಿವಾಹ ಕಾನೂನಿನ ಪ್ರಕಾರ ಅಪರಾಧವಾಗಿರುತ್ತದೆ. ಈ ಅಪರಾಧಕ್ಕೆ 2 ವರ್ಷ ಕಠಿಣ ಜೈಲು ಶಿಕ್ಷೆ 2 ಲಕ್ಷ ರೂಪಾಯಿ ದಂಡ ವಿಧಿಸಲಾಗುತ್ತದೆ ಎಂದು ಶ್ರೀಮತಿ ಶೀವಕಾಂತರವರು ತಿಳಿಸಿದರು. ಈ ಒಂದು ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾದ ಅಬೇದಾ ಬೇಗಂ 13 ಜನ ಮಹಿಳೆಯರು ಭಾಗವಹಿಸಿದರು.

## "ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳಿಗೆ ಚೆಕ್ ವಿತರಣೆಯ ಕಾರ್ಯಕ್ರಮ"



ಆಗಸ್ಟ್ 13 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಪೌಂಡೇಶನ ಸಂಯುಕ್ತಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಅಡಿಯಲ್ಲಿ ಕಲಬುರಗಿ ನಗರದಲ್ಲಿರುವ ಸರಕಾರಿ ಉರ್ದು ಮಾದರಿ ಪ್ರಾಥಮಿಕ ಶಾಲೆ ಎಂ.ಎಸ್.ಕೆ ಮಿಲ್ಲ್ ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳಿಗೆ ಚೆಕ್ ವಿತರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ದೀಪಕ್ ಅವರು 03 ಮಕ್ಕಳಿಗೆ ಚೆಕ್ ವಿತರಣೆ ಮಾಡಿ ಬೆಳವಣಿಗೆ ಕುಂಟಿತವಿರುವ ಮಕ್ಕಳಿಗೆ ಸರ್ಕಾರದಿಂದ ಯಾವೆಲ್ಲಾ ಸೌಲಭ್ಯ ಸಿಗುತ್ತವೆ ಮತ್ತು ಸೌಲಭ್ಯಗಳನ್ನು ಪಡೆಯಲು ಪಾಲಕರು ಒಟ್ಟುಗೂಡಿ ಪಾಲಕರ ಸಭೆಯನ್ನು ಮಾಡಬೇಕೆಂದು ತಿಳಿಸಿದರು. ಶಾಲೆಯ ಮುಖ್ಯ ಗುರುಗಳಾದ ಅತಿಯ ಜಬಿನ ಅವರು ಯಾವ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಲ್ಲರಿಗು ಉತ್ತಮವಾದ ಶಿಕ್ಷಣವನ್ನು ನೀಡಬೆಕೆಂದು ತಿಳಿಸಿದರು. ಎಸ್.ಡಿ.ಎಂ.ಸಿ ಅಧ್ಯಕ್ಷರು ಹಲೀಮ್ ಮತ್ತು ಶೀವಕಾಂತ ಶಿಕ್ಷಕರು ಅಂಗನವಾಡಿ ಕಾರ್ಯಕರ್ತೆ ಮತ್ತು ಪಾಲಕರು ಒಟ್ಟು 20 ಜನ ಭಾಗವಹಿಸಿದರು.

## "ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳ ಕುರಿತು ಜಾಗೃತಿ ಕಾರ್ಯಕ್ರಮ"




ಕಲಬುರಗಿ ತಾಲ್ಲೂಕಿನ ಹಾಗರಗುಂಡಗಿ ಗ್ರಾಮದ ಸರಕಾರಿ ಪ್ರಾಥಮಿಕ ಆರೋಗ್ಯ ಉಪ-ಕೇಂದ್ರದಲ್ಲಿ ಆಗಸ್ಟ್ 22 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ರಾಜಕುಮಾರ ಇವರು ಮಾತನಾಡಿ ಉಪಸ್ಥಿತರಿದ್ದ ತಾಯಂದಿರಿಗೆ ತಮ್ಮ ಮಕ್ಕಳು ಬೆಳವಣಿಗೆಯ ಹಂತಗಳ ಕುರಿತು ತಮಗೆ ಮಹಿತಿ ತಿಳಿದಿರಬೆಕು. ಇದರಿಂದ ಮಕ್ಕಳ ಬೆಳವಣಿಗೆಯಲಿ ಕುಂಠಿತ ಗೊಂಡಕೂಡಲೆ ಆ ಹಂತದ ಕುಂಠಿತವನ್ನು ಶಿಘ್ರವಾಗಿ ಪತ್ತೆ ಹಚ್ಚುವುದಕ್ಕೆ ಸಹಕಾರಿಯಾಗಲಿದೆ. ಅಂತಹ ಮಕ್ಕಳಿಗೆ ಉತ್ತೇಜಕ ಚಟುಟಿಕೆಯನ್ನು ಮಾಡಿಸುವುದರಿಂದ ಮಕ್ಕಳ ಬೆಳವಣಿಗೆಯ ಹಂತಗಳನ್ನು ಸರಿಪಡಿಸಬಹುದಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ 10 ಜನ ತಾಯಂದಿರು ಹಾಗೂ ಸರಕಾರಿ ಪ್ರಾಥಮಿಕ ಆರೋಗ್ಯ ಉಪ-ಕೇಂದ್ರದ ಸಿಬ್ಬಂದಿ ವರ್ಗದವರು ಭಾಗವಹಿಸಿದರು.

## "ಶೀಘ್ರ ಪತ್ತೇ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ"



ಆಗಸ್ಟ್ 24ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜೀ ಅವರ ಸಹಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಪಾಣೆಗಾಂವ ಗ್ರಾಮದಲ್ಲಿ ಬರುವ, ಸರ್ಕಾರಿ ಹಿರಿಯ ಪ್ರಾಥ್ರಮಿಕ ಉರ್ದು ಮಾಧ್ಯಮ ಶಾಲೆಯಲ್ಲಿ ಜಾಗೃತಿ ಕಾರ್ಯಕ್ರಮ ಹಮೀಕೋಳ್ಳಲಾಯಿತು. 0ರಿಂದ 6 ವರ್ಷದಲ್ಲಿ ಬರುವ ಮಕ್ಕಳಲ್ಲಿ ಯಾವತರಹದ ನ್ಯೂನತೆಕಂಡು ಬರುತ್ತವೆ ಅಂದರೆ ಮೂರು ತಿಂಗಳಲ್ಲಿ ಮಗುವಿನ ಕತ್ತು ನಿಲ್ಲಬೇಕು, 9 ತಿಂಗಳಲ್ಲಿ ಮಗು ಅಂಬೆಗಾಲು ಹಾಕಬೇಕು, 13 ತಿಂಗಳಿಂದ 18 ತಿಂಗಳವರೆಗೆ ಮಗು ಮೆಟ್ಟಿಲನ್ನು ಹತ್ತಬೇಕು, 3ರಿಂದ 4ವರ್ಷದ ಮಗು ಎಲ್ಲರ ಜೋತೆಗೆ ಆಟವಾಡ ಬೇಕು. ಈ ಎಲ್ಲಾ ಮೇಲಿನ ಅಂಶಗಳು ಮಕ್ಕಳಲ್ಲಿ ಕಂಡು ಬರದೆ ಇದ್ದರೆ ಮಗುವಿನ ಬೆಳವಣಿಗೆಯಲ್ಲಿ ನ್ಯೂನತೆ ಇದೆ ಎಂದು ತಿಳಿದುಕೋಳಬೇಕು, ಇಂತಹ ಮಕ್ಕಳು ಕಂಡುಬಂದರೆ ನಮ್ಮ ಸಂಸ್ಥೆಗೆ ತಿಳಿಸಿ ಎಂದು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ 22 ಜನರು ಉಪಸ್ಥಿತರಿದ್ದರು.

## "ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಗುವಿಗೆ ಸಾಧನೆ ಸಲಕರಣೆ"



ಆಗಸ್ಟ್ 20 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನರವರ ಸಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಕಲಬುರಗಿ ತಾಲೂಕಿನ ಸಾವಳಗಿ ಗ್ರಾಮದ ಚೇತನ ಕೇಂದ್ರದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಗುವಿಗೆ ಸಾಧನೆ ಸಲಕರಣೆಗಳನ್ನು ಉಪಯೋಗಿಸಿಕೊಂಡು ನಡೆಸುವ ಚಟುವಟಿಕೆಯನ್ನು ಲಕ್ಷ್ಮಿ ಅವರು ಮಾಡಿದರು.

## "ಶೀಘ್ರ ಪತ್ತೇ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮ"



ಕಲಬುರ್ಗಿ ನಗರ ಪ್ರದೇಶದಲ್ಲಿ ಬರುವಂತಹ ಅಬುಬಕರ್ ಅಂಗನವಾಡಿ ಕೇಂದ್ರದಲ್ಲಿ ಅಗಸ್ಟ್ 13 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜೀ ಫೌಂಡೇಶನ್ ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೇ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೋಳ್ಳಲಾಯಿತ್ತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಕುರಿತು ಮಾಹಿತಿಯನ್ನು ನೀಡಲಾಯಿತ್ತು. 0–6 ಬೇಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳು ಅಂದರೇ ಹೇಗೆ ಇರುತ್ತಾರೆ ಅಂದರೇ 4 ವರ್ಷದ ಮಗು ಸರಳವಾಗಿ ಮಾತ್ತನಾಡದೆ ಇರುವುದ್ದು. 1 ವರ್ಷದ ಮಗುವಿದ್ದರು ಕತ್ತು ಕುಳಿತು ಕೋಳದೆ ಇರುವುದು, ಮಗು ನಡೆದಾಡದೆ ಇರುವುದ್ದು, ಈ ರೀತಿಯಾಗಿ ಅನೇಕ ರೀತಿಯ ಸಮ್ಮಸ್ಯೆ ಹೊಂದಿರುವಂತಹ ಮಕ್ಕಳಿಗೆ ಸೇವಾಸಂಗಮ ಸಂಸ್ಥೆ ಈ ಎಲ್ಲಾ ಮಕ್ಕಳಿಗೆ ಏನೇಲ್ಲಾ ಸೌಲಭ್ಯಗಳು ದೋರೆಯುತ್ತದೆ ಹಾಗೂ ಆ ಮಕ್ಕಳಿಗೆ ಏನೇಲ್ಲಾ ಚಟುವಟಿಕೆ ನೀಡುತ್ತೆವೆ ಹಾಗೂ ಸರ್ಕಾರಿ ಸೌಲಭ್ಯಗಳು ದೋರೆಯುವಲ್ಲಿ ಸೇವಾ ಸಂಗಮ ಸಂಸ್ಥೆಯು ಸಹಕಾರ ನೀಡುವುದರಲ್ಲಿ ಸೇವಾ ಸಂಗಮ ಸಂಸ್ಥೆಯು ಪ್ರಮುಖ ಸೇವೆಯನ್ನು ನೀಡುತ್ತಿದೆ ಎಂಬುದ್ದರ ಕುರಿತು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಜನರಿಗೆ ಮಾಹಿತಿ ನೀಡಲಾಯಿತ್ತು. ಒಟ್ಟು 14 ಜನಾ ಪಾಲ್ಗೊಂಡಿದ್ದರು.

# "ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ"

## "ಶಾಲೆಯ ಶೀಕ್ಷಕರಿಗೆ ಹಾಗೂ ಮಕ್ಕಳಿಗೆ ಕ್ಯಾನ್ಸರ್ ರೋಗದ ಕುರಿತು ಜಾಗೃತಿ ಕಾರ್ಯಕ್ರಮ"



ಆಗಸ್ಟ್ 28 ರಂದು ಕಲಬುರಗಿ ತಾಲ್ಲೂಕಿನ ಕವಲ್ಗ ಬಿ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಸೇವಾ ಸಂಗಮ ಸಂಸ್ಥೆ ವತಿಯಿಂದ ಶಾಲೆಯ ಶೀಕ್ಷಕರಿಗೆ ಹಾಗೂ ಮಕ್ಕಳಿಗೆ ಕ್ಯಾನ್ಸರ್ ರೋಗದ ಕುರಿತು ಜಾಗೃತಿ ಕಾರ್ಯಕ್ರಮವನು ಹಮ್ಮಿಕೊಳ್ಳಲಾಯಿತ್ತು. ಶ್ರೀ ರಾಜಕುಮಾರ ಅವರು ಕ್ಯಾನ್ಸರ್ ರೋಗವು ಹೇಗೆ ತಡೆಗಟ್ಟಬಹುದು ? ಕ್ಯಾನ್ಸರ್ ಕಾಯಿಲೆ ಬರದಂತೆ ಸಂಪೂರ್ಣವಾಗಿ ತಡೆಗಟ್ಟುವುದು ಅಸಾಧ್ಯ ಆದರೆ ಕ್ಯಾನ್ಸರ್ಗೆ ಕಾರಣ ಆಗಬಹುದು ಅಪಾಯಗಳನ್ನು ತಡೆಯಬಹುದು. ತಾಜಾ ಹಣ್ಣು ತರಕಾರಿಗಳ ಸೇವನೆ ನಮ್ಮ ಶರೀರದಲ್ಲಿ ರೋಗ ನಿರೋಧಕ ಪ್ರಮಾಣವನ್ನು ಹೆಚ್ಚಿಸುತ್ತದೆ. ಮತ್ತು ಧಾತುಗಳಿಂದ ಹಾನಿ ಆಗುವುದನ್ನು ತಡೆಯುತ್ತದೆ. ನೀವು ತಂಬಾಕನ್ನು ಯಾವುದೇರೂಪದಲ್ಲಿ ಸೇವಿಸುತ್ತಿದ್ದರೂ, ಆ ಎಲ್ಲಾರೀತಿಯ ತಂಬಾಕು ಸೇವನೆ ನಿಲ್ಲಿಸಿಬಿಡಿ. ತಂಬಾಕು ಅನ್ನುವುದು ಬಹಳ ಅಪಾಯಕಾರಿ ಉತ್ಪನ್ನ ಆಗಿದ್ದು ಕ್ಯಾನ್ಸರ್ & ಅವಧಿ ಪೂರ್ವ ಮರಣ ಸೇರಿದಂತೆ ಇದು ಹಲವಾರು ರೀತಿಯ ತೊಂದರೆ ಉಂಟು ಮಾಡಿತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶಿಕ್ಷಕರು ಮತ್ತು ಮಕ್ಕಳು ಸೇರಿ 100 ಜನರು ಭಾಗವಹಿಸಿದರು.

## "7ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ದಂತ ತಪಾಸಣೆ ಶಿಬಿರ"



ಅಗಸ್ಟ್ 20 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಆಲ್ ಬ್ರದರ್ ದಂತ ಕಾಲೇಜು ಮತ್ತು ಆಸ್ಪತ್ರೆ ಇವರ ಸಂಯುಕ್ತ ಆಶ್ರಯದಲ್ಲಿ ಸೆಂಟ್ ಮೇರಿ ಶಾಲೆ, ಕಲಬುರಗಿಯಲ್ಲಿ 7ನೇ ತರಗತಿಯಿಂದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ದಂತ ತಪಾಸಣೆ ಶಿಬಿರವನ್ನು ಆಯೋಜಿಸಲಾಯಿತ್ತು, ಈ ಒಂದು ಶಿಬಿರದಲ್ಲಿ ಆಲ್–ಬ್ರದರ್ ವೈದ್ಯಕೀಯ ತಂಡದವರು ಮಾತನಾಡುತ್ತಾ, ದಿನನಿತ್ಯದ ಚಟುವಟಿಕೆಗಳಲ್ಲಿ ಯಾವರೀತಿ ದಂತವನ್ನು ಸ್ವಚ್ಚತೆಯಿಂದ ಕಾಪಾಡಿಕೊಳ್ಳುವುದರ ಕುರಿತು ಪ್ರಾಯೋಗಿಕವಾಗಿ ಮಕ್ಕಳಲ್ಲಿ ಅರಿವು ಮೂಡಿಸಿದರು, ಈ ಸಂದರ್ಭದಲ್ಲಿ ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ, ಪಾದರ್ ವಿಕ್ಟರ್ ವಾಸ್‌ಅವರು ಮಾತನಾಡಿ, "ಆರೋಗ್ಯವೇ ಭಾಗ್ಯ" ಎನ್ನುವಂತೆ ದಂತವು ನಮ್ಮ ದೇಹದ ಪ್ರಕ್ರಿಯೆ ಆಗಿದ್ದು, ಆಲ್ ಬ್ರದರ್ ಕಾಲೇಜು ಮತ್ತು ಆಸ್ಪತ್ರೆಯವರು ಸೇವಾ ಸಂಗಮ ಸಂಸ್ಥೆಯ ಮೂಲಕ ನಿಮಗೆ ದಂತ ತಪಾಸಣೆಯನ್ನು ನೀಡುತ್ತಿದ್ದಾರೆ, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು, ಈ ಕಾರ್ಯಕ್ರಮದಲ್ಲಿ ಸೆಂಟ್ ಮೇರಿ ಶಾಲೆಯ ಪ್ರಾಂಶುಪಾಲರಾದ ಸಿಸ್ಟರ್ ಜಯಶ್ರೀ ಹಾಗೂ ಶಾಲೆಯ ಶಿಕ್ಷಕರು ಮತ್ತು ಸೇವಾ ಸಂಗಮ ಸಂಸ್ಥೆಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು, ಈ ಶಿಬಿರದಲ್ಲಿ 760 ಮಕ್ಕಳು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಂಡರು.



# "ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು"

## ಸಮುದಾಯ ಆಧಾರಿತವಾಗಿ ಆಪ್ತ ಸಮಾಲೋಚನೆ ತರಬೇತಿ ಕಾರ್ಯಾಗಾರ

ಮಲ್ಲಮ್ಮ ನುಡಿ ವಾರ್ತೆ
(ಸತೀಷಕುಮಾರ ತುಪ್ಪದ)

ಹುಮನಾಬಾದ ಆಗಸ್ಟ್ 08: ಆರ್ಬಿಟ್ ಸಂಸ್ಥೆಯಲ್ಲಿ ನಮ್ಮ ಜೀವನ ಕಾರ್ಯಕ್ರಮದಡಿಯಲ್ಲಿ ಹುಮನಾಬಾದ ಹಾಗೂ ಚಿಟಗುಪ್ಪ ತಾಲೂಕಿನ ವಿ ಆರ್ ಡಬ್ಲ್ಯೂಗಳಿಗೆ ಆಪ್ತ ಸಮಾಲೋಚನೆ ತರಬೇತಿ ಹಮ್ಮಿಕೊಳ್ಳಲಾಗಿತ್ತು.

ಮೊದಲಿಗೆ ವೇದಿಕೆ ಮೇಲಿನ ಗಣ್ಯರಿಗೆ ಶ್ರೀಮತಿ ಪ್ರೀತಿ ಅವರು ಸ್ವಾಗತಿಸಿದರು. ನಂತರ ಗಣ್ಯರಿಂದ ಗಿಡಕ್ಕೆ ನೀರು ಹಾಕುವುದರ ಮೂಲಕ ಕಾರ್ಯಾಗಾರದ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಆರ್ಬಿಟ್ ಸಂಸ್ಥೆಯು ಸುಮಾರು 30 ವರ್ಷಗಳಿಂದ ಸಮಾಜಸೇವೆ ಮಾಡುತ್ತಾ ಹಲವಾರು ಯೋಜನೆಗಳಿಂದ ಸಮಾಜದಿಂದ ಅಂಚಿಗೆ ತಳ್ಳಲ್ಪಟ್ಟವರ ಹಾಗೂ ಬಡಜನರ ಸಮುದಾಯದ ವ್ಯವಸ್ಥೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ ಮತ್ತು ಪ್ರಸ್ತುತ ಕಾರ್ಯಾಗಾರದ ಉದ್ದೇಶ ಮಾನಸಿಕ ಅಸ್ವಸ್ಥರನ್ನು ಸಮುದಾಯವಾಗಿ ಪುನರ್ಜೀವನ ಕಲ್ಪಿಸುವ ಯೋಜನೆ ಇದ್ದು ಈ ಕಾರ್ಯಕ್ರಮವನ್ನು ಸಾಂಸ್ಥಿಕ ಬದಲಾಗಿ ಸಮುದಾಯವಾಗಿ ಮಾರ್ಪಡಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಎಂದು ನವ ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಪ್ರವೀಣ್ ಕುಮಾರ್ ಅವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ವ್ಯಕ್ತಪಡಿಸಿದರು.

ತದನಂತರ ಸಂಸ್ಥೆಯ ನಿರ್ದೇಶಕರಾದ ಒಂದನೆಯ ಫಾದರ್ ವಿಕ್ಟರ್ ವಾಸರವರು ತರಬೇತಿ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡುತ್ತಾ ಎರಡು ಕೈಯಿಂದ ಚಪ್ಪಾಳೆ ಬಾರಿಸಿದರೆ ಹೇಗೆ ಫಲಿತಾಂಶ ಸಿಗುತ್ತದೆಯೋ ಹಾಗೆಯೇ ಸಂಸ್ಥೆಯೊಂದಿಗೆ ವಿಕಲಚೇತನರ ಪುನರ್ವಸತಿ ಕಲ್ಪಿಸುವ ಕಾರ್ಯಕರ್ತರ ಸಹಕಾರ ಬಹಳ ಮುಖ್ಯ ಎಂದು ತಿಳಿಸಿದರು ಹಾಗೂ ಕಾರ್ಯಾಗಾರದ ತರಬೇತಿಯನ್ನು ಪಡೆದು ತಾವುಗಳು ಆಪ್ತ ಸಮಾಲೋಚಕರಾಗಿ ಕಾರ್ಯನಿರ್ವಹಿಸಲು ಸಾಧ್ಯ ಎಂದು ಪ್ರೋತ್ಸಾಹಿಸಿದರು.

ತದನಂತರ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಒಂದನೇ ಫಾದರ ವಿನ್ಸೆಂಟ್ ಪೇರೇರ ಅವರು ಕಾರ್ಯಾಗಾರದ ವರ್ಗದಲ್ಲಿ ಆಪ್ತ ಸಮಾಲೋಚನೆ ಎಂದರೇನು? ಆಪ್ತ ಸಮಾಲೋಚಕರಿಗೆ ಇರುವ ಕೌಶಲ್ಯಗಳ ಮತ್ತು ಆಪ್ತ ಸಮಾಲೋಚನೆಯ ವಿಧಗಳನ್ನು ಸಂಕ್ಷಿಪ್ತವಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಒಂದನೇ ಫಾದರ ವಿಜಯಕುಮಾರ್, ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾ ಮ್ಯಾಥಿವ್. ವಿಕಲಚೇತನರ ಜಿಲ್ಲಾ ಸಂಯೋಜಕರಾದ ಸಂತೋಷ್ ಪಟ್ಟಧರ್, ಎಂ ಆರ್ ಡಬ್ಲ್ಯೂ ಗಳಾದ ಜಗನ್ನಾಥ್ ಗಾರಿ ಮತ್ತು ತಾಲೂಕಿನ ಎಲ್ಲ ವಿ ಆರ್ ಡಬ್ಲ್ಯೂಗಳು. ನವಜೀವನ ಸಿಬ್ಬಂದಿ ವರ್ಗದರು ಹಾಜರಿದ್ದು ಶ್ರೀಮತಿ ಪೂಜಾ ನಿರೂಪಿಸಿ, ಶ್ರೀ ಹನುಮಂತ್ ಪ್ರಾರ್ಥಿಸಿದರು ಮತ್ತು ಈ ಕಾರ್ಯಾಗಾರವನ್ನು ಶ್ರೀ ಲೋಕೇಶ್ ಅವರ ವಂದನೆಗಳೊಂದಿಗೆ ಮುಕ್ತಾಯ ಹೇಳಲಾಯಿತು.



ಸಂಯುಕ್ತ ಕರ್ನಾಟಕ

## 'ಮಾನಸಿಕ ಅಸ್ವಸ್ಥರನ್ನು ಮುಖ್ಯವಾಹಿನಿಗೆ ತರುವ ಕಾರ್ಯ ಪ್ರಶಂಸನೀಯ'

ಸಂ.ಕ.ಸಮಾಚಾರ ಹುಮನಾಬಾದ : ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ನೀಡಿ, ಗುಣಮುಖರನ್ನಾಗಿಸಿ, ಮುಖ್ಯವಾಹಿನಿಗೆ ತರುತ್ತಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್ ಮತ್ತು ಆರ್ಬಿಟ್ ಸಂಸ್ಥೆಯ ಕಾರ್ಯ ಪ್ರಶಂಸನೀಯ ಎಂದು ಕಲಬುರಗಿ ಧರ್ಮ ಪ್ರಾಂತದ ಧರ್ಮಾಧ್ಯಕ್ಷ ಬಿಶಪ್ ರೆವರೆಂಡ್ ಮೈಕೆಲ್ ಮಿರಾಂದ್ ಅಭಿಪ್ರಾಯಪಟ್ಟರು.

ಗುಣಮುಖರಾದ ಮಾನಸಿಕ ಅಸ್ವಸ್ಥರಿಗಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಾಯಧನ ಮತ್ತು ಕುರಿ, ಕೋಳಿ ವಿತರಣೆ ಸಂಬಂಧ ಪಟ್ಟಣದ ಆರ್ಬಿಟ್ ಸಂಸ್ಥೆಯಲ್ಲಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಉದ್ಯೋಗ ಪರಿಕರ ವಿತರಿಸಿ ಮಾತನಾಡಿ ಈಗ ನೀಡಲಾದ ಕುರಿ-ಕೋಳಿಗಳನ್ನು ವೃದ್ಧಿಸಿ, ಹೆಚ್ಚಿನ ಆದಾಯಗಳಿಸಿ, ಸ್ವಾವಲಂಬಿ ಜೀವನ ಸಾಗಿಸಬೇಕು ಎಂದು ಸಲಹೆ ನೀಡಿದರು. ಸರ್ಕಾರಿ ಆಸ್ಪತ್ರೆ ಮುಖ್ಯ ಆರೋಗ್ಯ ಅಧಿಕಾರಿ ಡಾ.ನಾಗನಾಥ ಹುಲಸೂರೆ ಮಾತನಾಡಿ ಮಾನಸಿಕ ಅಸ್ವಸ್ಥರನ್ನು ನಿರ್ಲಕ್ಷಿಸದೇ ಮುಖ್ಯವಾಹಿನಿಗೆ ತರುವುದಕ್ಕಾಗಿ ಪ್ರೋತ್ಸಾಹಿಸಿದರೇ ಅವರು ಇತರರಂತೆ ಸಹಜ ಜೀವನ ಸಾಗಿಸಲು ಸಾಧ್ಯವಾಗುತ್ತದೆ. ಹಾಗೆ ನೋಡಿದರೇ ಪ್ರಪಂಚದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗಳು ಒಂದಿಲ್ಲೊಂದು ರೀತಿಯಲ್ಲಿ ಮನೋರೋಗಿಗಳೇ ಆಗಿದ್ದೇವೆ. ನಿತ್ಯ ಜೀವನದಲ್ಲಿ ಆಗುವ ಏರುಪೇರುಗಳೆಲ್ಲವೂ ಮಾನಸಿಕ ಅಸ್ವಸ್ಥತೆ ಲಕ್ಷಣಗಳಾಗಿವೆ ಎಂದರು.

ಅಜೀಂ ಪ್ರೇಮ್‌ಜಿ ಫೌಂಡೇಷನ್ ಜಿಲ್ಲಾ ಸಂಯೋಜಕ ಶಿವಕುಮಾರ, ವಿಕಲಚೇತನರ ಪುನರ್ವಸತಿ ಕೇಂದ್ರ ಕಾರ್ಯಕರ್ತ ಜಗನಾಥ ಗಾತಿ, ಆರ್ಬಿಟ್ ಸಂಸ್ಥೆ ನಿರ್ದೇಶಕ ಫಾದರ್ ವಿಕ್ಟರ್ ವಾಸ್, ಸಹ ನಿರ್ದೇಶಕ ವಿಜಯಕುಮಾರ, ನವಜೀವನ ಕಾರ್ಯಕ್ರಮ ಸಮಯೋಜಕ ಪ್ರವೀಣ, ಸಂತೋಷ ಪಟ್ಟಧರ, ಪೂಜಾ, ಹನುಮಂತ, ಲೋಕೇಶ, ಸುನೀತಾ ಮತ್ತಿತರಿದ್ದರು.



ಹುಮನಾಬಾದ್‌ನ ಆರ್ಬಿಟ್ ಸಂಸ್ಥೆಯಲ್ಲಿ ಅಜೀಂ ಪ್ರೇಮ್ ಜೀ ಫೌಂಡೇಷನ್ ಸಹಯೋಗದೊಂದಿಗೆ ಗುಣಮುಖರಾದ ಮಾನಸಿಕ ಅಸ್ವಸ್ಥರಿಗೆ ಸ್ವಯಂ ಉದ್ಯೋಗಕ್ಕಾಗಿ ಕುರಿ-ಕೋಳಿ ವಿತರಿಸುವ ಕಾರ್ಯಕ್ರಮ ಕಲ್ಬುರ್ಗಿ ಪ್ರಾಂತ ಧರ್ಮಾಧ್ಯಕ್ಷ ಬಿಷಪ್ ರೆವರೆಂಡ್ ಮೈಕೆಲ್ ಮಿರಾಂದ್ ಶನಿವಾರ ಉದ್ಘಾಟಿಸಿದರು.

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ SAMYUKTA KARNATAKA
ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಶತಕದತ್ತ ಓಟ... ತೊಂಬತ್ತರ ನೋಟ



ಹುಮನಾಬಾದ್‌ನ ಆರ್ಬಿಟ್ ಸಂಸ್ಥೆಯಲ್ಲಿ ವಿಕಲಚೇತನರ ಪುನರ್ವಸತಿ ಕಾರ್ಯಕರ್ತರಿಗಾಗಿ ಮಂಗಳವಾರ ಆಯೋಜಿಸಿದ ವಿಶೇಷ ತರಬೇತಿ ಕಾರ್ಯಾಗಾರ ಫಾದರ್ ವಿನ್ಸೆಂಟ್ ಪೇರೇರ್ ಉದ್ಘಾಟಿಸಿದರು.

## 'ವಿಕಲಚೇತನರ ಪುನರ್ವಸತಿ ಕಾರ್ಯಕರ್ತರು ಕೈಜೋಡಿಸಿ'

ಸಂ.ಕ.ಸಮಾಚಾರ ಹುಮನಾಬಾದ: ಆರ್ಬಿಟ್ ಸಂಸ್ಥೆ ವಿಕಲಚೇತನರಿಗಾಗಿ ಮಾಡುವ ಕೆಲಸದೊಂದಿಗೆ ವಿಕಲಚೇತನರ ಪುನರ್ವಸತಿ ಕಾರ್ಯಕರ್ತರು ಕೈಜೋಡಿಸಿದರೇ ಅವರನ್ನು ಮುಖ್ಯವಾಹಿನಿಗೆ ತರುವ ಕೆಲಸ ಅತ್ಯಂತ ಸರಳ ಹಾಗೂ ಸುಗಮವಾಗಿ ಸಾಗಲು ಸಾಧ್ಯವಾಗುತ್ತದೆ ಎಂದು ಫಾದರ್ ವಿನ್ಸೆಂಟ್ ಪೇರೇರ್ ಸಲಹೆ ನೀಡಿದರು.

ಇಲ್ಲಿಯ ಆರ್ಬಿಟ್ ಸಂಸ್ಥೆಯಲ್ಲಿ ವಿಕಲಚೇತನರ ಪುನರ್ವಸತಿ ಕಾರ್ಯಕರ್ತರಿಗಾಗಿ ಮಂಗಳವಾರ ಆಯೋಜಿಸಿದ ವಿಶೇಷ ತರಬೇತಿ ಕಾರ್ಯಾಗಾರದಲ್ಲಿ ವಿಶೇಷ ಉಪನ್ಯಾಸ ನೀಡಿ ಎರಡು ಕೈಗಳಿಂದ ಬಾರಿಸಿದ ಚಪ್ಪಾಳೆ ಹೇಗೆ ಶೋಭೆ ಕೊಡುತ್ತದೋ ಹಾಗೆಯೆ ಎರಡೂ ಸಂಸ್ಥೆಗಳು ಸೇರಿ ವಿಕಲಚೇತನರನ್ನು ಮುಖ್ಯವಾಹಿನಿಗೆ ತರಲು ಪೂರಕವಾಗುತ್ತದೆ ಎಂದರು.

ಆರ್ಬಿಟ್ ಸಂಸ್ಥೆ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಸಭೆ ಅಧ್ಯಕ್ಷತೆ ವಹಿಸಿ, ಮಾರ್ಗದರ್ಶನ ನೀಡಿದರು. ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕ ವಿಜಯಕುಮಾರ, ಆರ್ಬಿಟ್ ಸಂಸ್ಥೆ ಕಾರ್ಯಕ್ರಮ ವ್ಯವಸ್ಥಾಪಕಿ ಸಿಸ್ಟರ್ ವಿಲ್ಮಾ ಮ್ಯಾಥಿವ್, ವಿಕಲಚೇತನರ ಜಿಲ್ಲಾ ಸಂಯೋಜಕ ಸಂತೋಷ ಪಟ್ಟಧರ್, ಎಂ.ಆರ್.ಡಬ್ಲ್ಯು ಜಗನಾಥ ಗಾರಿ, ಪೂಜಾ, ಹನುಮಂತ, ಪ್ರವೀಣ, ಲೋಕೇಶ ಮೊದಲಾದವರಿದ್ದರು.

## ವಿಕಲಚೇತನರ ಪುನರ್ವಸತಿಗೆ ಕಾರ್ಯಕರ್ತರು ಕೈಜೋಡಿಸಿ ಫಾದರ್ ವಿನ್ಸೆಂಟ್



ಹುಮ್ನಾಬಾದ್ ಆರ್ಬಿಟ್ ಸಂಸ್ಥೆ ವಿಕಲಚೇತನರಿಗಾಗಿ ಮಾಡುವ ಕೆಲಸದೊಂದಿಗೆ ವಿಕಲಚೇತನರ ಪುನರ್ವಸತಿಗೆ ಕೈಜೋಡಿಸಿದರೆ ಅವರನ್ನು ಮುಖ್ಯವಾಹಿನಿಗೆ ತರುವ ಕೆಲಸ ಅತ್ಯಂತ ಸರಳ ಹಾಗೂ ಸುಗಮವಾಗಿ ಸಾಗಲು ಸಾಧ್ಯವಾಗುತ್ತದೆ ಎಂದು ಫಾದರ್ ವಿನ್ಸೆಂಟ್ ಸಲಹೆ ನೀಡಿದರು.

ಆರ್ಬಿಟ್ ಸಂಸ್ಥೆಯಲ್ಲಿ ಪುನರ್ ವಸತಿ ಕಾರ್ಯಕರ್ತರಿಗಾಗಿ ವಿಶೇಷ ಉಪನ್ಯಾಸ ನೀಡಿ ಎರಡು ಕೈಗಳಿಂದ ಬಾರಿಸಿದ ಚಪ್ಪಾಳೆ ಹೇಗೆ ಶೋಭೆ ಕೊಡುತ್ತದೆ ಹಾಗೆ ಎರಡು ಸಂಸ್ಥೆಗಳು ಸೇರಿ ವಿಕಲಚೇತನರನ್ನು ಮುಖ್ಯವಾಹಿನಿಗೆ ತರಲು ಪೂರಕವಾಗುತ್ತದೆ ಎಂದು ತಿಳಿಸಿದರು. ಫಾದರ್ ವಿಕ್ಟರ್ ವಾಸ್, ವಿಜಯಕುಮಾರ್, ಸಿಸ್ಟರ್ ವಿಲ್ಮಾ, ವಿಕಲಚೇತನರ ಜಿಲ್ಲಾ ಸಂಯೋಜಕ ಸಂತೋಷ್ ಪಟ್ಟದಾರ, ಸಭೆಯಲ್ಲಿ ಉಪಸ್ಥಿತಿ ಇದ್ದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

| | | |
|---|---|---|
| Name | : | Sevasangama Development Society |
| Account No | : | 16040100022902 |
| IFSC Code | : | FDRL0001604 |
| Bank | : | Federal Bank |
| Branch | : | Super Market Kalaburagi |

Fr. Victor Anil Vas
Director, Seva Sangama & ORBIT

## Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in